ಮರುಪರಿಚಯ ಎಂಬ ಪದ ಏಕೆ ಬಳಸಿದೆನೆಂದರೆ, ಕಾಡು ಕಿತ್ತಳೆಗಳು ನಮ್ಮ ರಾಜ್ಯದಲ್ಲಿ ಬಹು ಹಿಂದಿನಿಂದಲೂ ಇವೆ! ಇವು ಅವಶ್ಯವಾಗಿ ಪಶ್ಚಿಮ ಘಟ್ಟಗಳಲ್ಲಿರುವ ಪುರಾತನ ಸಿಟ್ರಸ್ ಪ್ರಭೇದಗಳೇ ಇರಬೇಕು. (ಈ ಕುರಿತು ಸಂಶೋಧನೆ ಅಗತ್ಯವಿದೆ). ನಾಯಿ ಕಿತ್ತಳೆ, ಇಳ್ಳಿ ಹಣ್ಣು, ಚಿಟ್ಟಕಿತ್ತಳೆ ಮೊದಲಾದ ಹೆಸರುಗಳಿಂದ ಇವು ಸುಳ್ಯ, ಸಿರ್ಸಿ, ಸಾಗರ, ಚಿಕ್ಕಮಗಳೂರು ಮೊದಲಾದ ಕಡೆ ಮೊದಲಿನಿಂದಲೂ ಪರಿಚಿತ. ಸಿಹಿ ಕಿತ್ತಳೆ ಗಿಡಗಳನ್ನು ಕಸಿ ಮಾಡಲು ಕಾಡು ಕಿತ್ತಳೆ ಗಿಡಗಳ ಕಾಂಡವನ್ನು ಬಳಸುವುದುಂಟು. ಸಿಹಿಕಿತ್ತಳೆ ಹಣ್ಣಿನಲ್ಲಿ ನಾಲ್ಕಾರು ಬೀಜಗಳು ಕಂಡುಬಂದರೆ, ಕಾಡು ಕಿತ್ತಳೆಯಲ್ಲಿ ಹತ್ತಾರು ಬೀಜಗಳಿರುತ್ತವೆ ಮತ್ತು ಸಾಮಾನ್ಯವಾಗಿ ಇವು ಹುಳಿ; ಗಾತ್ರದಲ್ಲೂ ಚಿಕ್ಕವು. ಆದರೆ, ಒಂದು ಕಾಡು ಕಿತ್ತಳೆ ಮರದಲ್ಲಿ



ವರ್ಷಕ್ಕೆ ಐನೂರಕ್ಕೂ ಹೆಚ್ಚು ಹಣ್ಣುಗಳಾಗುವುದನ್ನು ಆ ಪ್ರದೇಶದ ಜನರು ಗಮನಿಸಿದ್ದಾರೆ. ಅಲ್ಲಿನ ಕಾಡಿನಂಚಿನಲ್ಲಿ, ತೋಟದ ಬದಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದ ಈ ಮರಗಳಿಂದ ದೊರೆಯುವ ಹಣ್ಣನ್ನು ತಾವು ತಿಂದಿದ್ದೇವೆ ಎಂದು ಹಲವು ಹಿರಿಯರು ನೆನಪಿಸಿಕೊಂಡು, 'ನಾಮಾಮಿ' ವಾಟ್ಸಾಪ್ ಗುಂಪಿನಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡರು ಮತ್ತು ಇದನ್ನು ದಾಖಲಿಸುವ ಪ್ರಯತ್ನ ನಡೆದಿದೆ.

ಕಾಡು ಕಿತ್ತಳೆ ಅಥವಾ ಇಳ್ಳಿ ಹಣ್ಣು ಮಲೆನಾಡಿಗರಿಗೆ ಸಾಕಷ್ಟು ಪರಿಚಿತ. ಇದರ ಜತೆಯಲ್ಲೇ ಹಲವು ಸಿಟ್ರಸ್ ತಳಿಯ ಹಣ್ಣುಗಳು ನಮ್ಮಲ್ಲಿ ಬೆಳೆಯುತ್ತವೆ. ಬಯಲು ಸೀಮೆಯಲ್ಲೊಂದು ಇಳ್ಳಿ ಹಣ್ಣು ಇದೆ; ಇದು ಸಿಟ್ರಸ್ ಗುಂಪಿಗೆ ಸೇರಿದ ಸಸ್ಯ; ಆದರೆ ಇದರಿಂದ ಜ್ಯೂಸ್ ತಯಾರಿಸಲು ಮಾತ್ರ ಸಾಧ್ಯ. ಆದರೆ, ಶಿರಸಿ ಪ್ರದೇಶದಲ್ಲಿ ಇಳ್ಳಿ ಹಣ್ಣು ಎಂದರೆ ಕಾಡುಕಿತ್ತಳೆ. ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಸಿಹಿ ಕಂಚಿ ಮತ್ತು ಕಹಿ ಕಂಚಿ ಎಂಬ ಎರಡು ಪ್ರಭೇದದ ಸಿಟ್ರಸ್ ಮರಗಳು ಕಾಣಸಿಗುತ್ತವೆ. ಇವುಗಳ ದೊಡ್ಡ ಗಾತ್ರದ ಹಣ್ಣುಗಳನ್ನು ತಿನ್ನಬಹುದು; ಆದರೆ ರುಚಿ ತುಸು ಕಡಿಮೆ ಎನ್ನಬಹುದು.

ಸಿಟ್ರಸ್ ಪ್ರಭೇದದ ಮೂಲವು ನಮ್ಮ ದೇಶ ಮತ್ತು ದಕ್ಷಿಣ ಏಷ್ಯಾವೇ ಆದರೂ, ಇಂದು ವಿದೇಶಗಳಲ್ಲಿ ಇವುಗಳ ವಿವಿಧ ತಳಿಗಳ ಅಭಿವೃದ್ಧಿ ಆಗಿದೆ. ಈ ರೀತಿ ಬೇರೆ ದೇಶಗಳಲ್ಲಿ ಅಭಿವೃದ್ಧಿ ಹೊಂದಿ, ಅಲ್ಲಿನ ಅಧಿಕೃತ ಹಣ್ಣು ಎಂದೇ ಗುರುತಿಸಲ್ಪಡುತ್ತಿರುವ ಹಣ್ಣುಗಳಲ್ಲಿ ಮೂಸಂಬಿ ಪ್ರಮುಖ. ಮೂಸಂಬಿ ಹಣ್ಣು ಮೂಲತಃ ನಮ್ಮ ದೇಶದ ಸಿಟ್ರಸ್ ಪ್ರಭೇದಗಳಿಂದ ರೂಪುಗೊಂಡ ಹಣ್ಣು. ಆದರೆ, ಇಂದು ಅಧಿಕೃತ ಮಾಹಿತಿಯನ್ನು ಗಮನಿಸಿದರೆ, ಮೂಸಂಬಿಯು ಇರಾನಿನ ದಕ್ಷಿಣ ಭಾಗದ ಹಣ್ಣು ಎಂದು ಪರಿಚಯಗೊಳ್ಳುತ್ತಿದೆ! ಅದಕ್ಕೆ ಕಾರಣವಿದೆ. ಮೂಸಂಬಿಯು ಹುಳಿ ಕಿತ್ತಳೆ (ಸಿಟ್ರಸ್ ಆರೆಂಟಿಯಮ್) ಮತ್ತು ಕಾಡು ಲಿಂಬೆ / ಗಜ ಲಿಂಬೆ (ಸಿಟ್ರಸ್ ಮೆಡಿಕಾ) ಸಸ್ಯಗಳ ಸಂಕರದಿಂದ ರೂಪುಗೊಂಡ ಹಣ್ಣು. ಸಿಟ್ರಸ್ ಮೆಡಿಕಾದ ಮೂಲವು ಹಿಮಾಲಯದ ತಪ್ಪಲು; ಹುಳಿ ಕಿತ್ತಳೆ ಸಹ ಭಾರತ ಮೂಲದ್ದು. ಇವೆರಡನ್ನೂ ಸಂಕರಗೊಳಿಸಿ, ಮೂಸಂಬಿ ಎಂಬ ಹಣ್ಣನ್ನು ಉತ್ಪಾದಿಸಿದ ಕೀರ್ತಿ ಇರಾನ್‌ಗೆ ಸಂದಿದೆ! ಮೂಸಂಬಿಯ ವಿಭಿನ್ನ ತಳಿಯು ಮೊಸಾಂಬಿಕ್ ದೇಶದಲ್ಲಿ ರೂಪುಗೊಂಡಿದ್ದು, ಇದನ್ನು ಪೋರ್ಚುಗೀಸರು ಭಾರತಕ್ಕೆ ತಂದರು ಎಂದು ದಾಖಲೆಗಳು ಹೇಳುತ್ತವೆ. ಮೂಸಂಬಿ ಎಂಬ ಪದವು ಇರಾನ್ ಮತ್ತು ಮೊಸಾಂಬಿಕ್ ಪದಗಳಿಂದ ಬಂದಿದೆ ಎನ್ನಲಾದೆ. ಮೂಸಂಬಿಯ ಮೂಲ ಇರಾನ್ ದೇಶವಾದರೂ, ಅದನ್ನು ರೂಪುಗೊಳಿಸುವಲ್ಲಿ ಬಳಸಿದ ಎರಡು ಸಿಟ್ರಸ್ ಸಸ್ಯಗಳು ನಮ್ಮ ದೇಶದ್ದು ಎಂದು ಅಭಿಮಾನಪಟ್ಟುಕೊಳ್ಳಬಹುದು. ಮುಸಂಬಿಯ ವಿಶೇಷವೆಂದರೆ, ಇದನ್ನು ಸೇವಿಸುವದರಿಂದ ಆರೋಗ್ಯ ಉತ್ತಮಗೊಳ್ಳುತ್ತದೆ ಮತ್ತು ಇರಾನ್ ದೇಶದಲ್ಲಿ ನೆಗಡಿ ಜ್ವರವಾದಾಗ ಇದರ ರಸವನ್ನು ನಾಟಿ ಔಷಧವಾಗಿ ಉಪಯೋಗಿಸುವರು! ಅಂತಹ ಔಷಧೀಯ ಗುಣಗಳು ಈ ಹಣ್ಣಿಗೆ ಇರುವುದಂತೂ ನಿಜ.

ಕಾಡು ಕಿತ್ತಳೆಯ ಕುರಿತು ಮಾತನಾಡುವಾಗೆಲ್ಲಾ, ನಾಡ ಕಿತ್ತಳೆಯ ವಿಚಾರವೂ ಬರಲೇಬೇಕು. ರುಚಿಕರ ಹಣ್ಣು ಕಿತ್ತಳೆಯು ನಮ್ಮ ರಾಜ್ಯದವರಿಗೆ ಕೊಡಗಿನ ಕಿತ್ತಳೆ ಎಂದೇ ಪರಿಚಿತ. ಕೆಲವು ದಶಕಗಳ ಹಿಂದೆ ಕೊಡಗಿನ ಕಿತ್ತಳೆ ಮರಗಳಿಗೆ ರೋಗವೊಂದು ಬಂದು, ಹಲವು ಮರಗಳು ನಾಶವಾದವು. ನಾಗಪುರದ ಕಿತ್ತಳೆಯು ಗಾತ್ರದಲ್ಲಿ ದೊಡ್ಡದಾಗಿದ್ದು, ಸಿಪ್ಪೆ ತೆಗೆಯಲು ಸುಲಭವಾಗಿದ್ದರಿಂದ, ಅದು ಇಂದು ಹೆಚ್ಚು ಜನಪ್ರಿಯ.

ಇಂತಹ ಹಲವು ಸಿಟ್ರಸ್ ಹಣ್ಣುಗಳ ಮೂಲವಾಗಿರುವ ಕಾಡು ಕಿತ್ತಳೆ ತಳಿಯು ಈಚಿನ ವರ್ಷಗಳಲ್ಲಿ ನಿಧಾನವಾಗಿ ಕಣ್ಮರೆಯಾಗುವುದನ್ನು ಗುರುತಿಸಲಾಗಿದೆ. ತನ್ನ ಪಾಡಿಗೆ ತಾನು ಬೆಳೆಯುತ್ತಿದ್ದ ಕಾಡು ಕಿತ್ತಳೆ ಅಥವಾ ನಾಯಿ ಕಿತ್ತಳೆಗೆ ಇಂತಹ ಅವಜ್ಞೆ ಏಕೆಂದರೆ, ಅದರಿಂದ ವಾಣಿಜ್ಯಕ ಉಪಯೋಗ ಇಲ್ಲ ಎಂಬ ಅಭಿಪ್ರಾಯ. ಬಹುಪಾಲು ಕೃಷಿಕರು ಇಂದು ವಾಣಿಜ್ಯಕ ಬೆಳೆಯತ್ತ ಹೆಚ್ಚು ಗಮನ ಹರಿಸಿರುವುದರಿಂದ, ಕಾಡು ಕಿತ್ತಳೆ, ನಾಯಿ ಕಿತ್ತಳೆ, ಇಳ್ಳಿ ಕಾಯಿ, ಎಳ್ಳಿ ಕಾಯಿ, ಹೆರಳೆ ಕಾಯಿ, ದುಡ್ಲೆ ಕಾಯಿ,(ಉಪ್ಪಿನ ಕಾಯಿ ಮಾಡಬಹುದು), ಗಜನಿಂಬೆ, ಸಿಹಿ ಕಂಚಿ ಮೊದಲಾದ ಸಿಟ್ರಸ್ ಪ್ರಭೇದಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ; ಎಷ್ಟರ ಮಟ್ಟಿಗೆ ಎಂದರೆ, ಹಿರಿಯರು ಇದನ್ನು ಸ್ಪಷ್ಟವಾಗಿ ನೆನಪಿಸಿಕೊಳ್ಳಬಲ್ಲರಾದರೂ, ಇಂದಿನ ಯುವ ಪೀಳಿಗೆಗೆ ಇಂತಹ ಹಣ್ಣುಗಳ ಪರಿಚಯವೇ ಮರೆತುಹೋಗುತ್ತಿದೆ! ಅದಾಗಬಾರದು ಅಲ್ಲವೆ? ಆದ್ದರಿಂದಲೇ, ಈಗ 'ನಾಮಾಮಿ' ಮಿತ್ರರು ಕಾಡು ಕಿತ್ತಳೆಯ ತಳಿಗಳನ್ನು ಗುರುತಿಸುವ ಪ್ರಯತ್ನದಲ್ಲಿ ತೊಡಗಿರುವುದು ನಿಜಕ್ಕೂ ಅನುಕರಣಾರ್ಹ. ನಿಮಲ್ಲೂ ಕಾಡು ಕಿತ್ತಳೆ ಮತ್ತು ದುಡ್ಲೆ ಮೊದಲಾದ ಸಿಟ್ರಸ್ ತಳಿಯ ಮಾಹಿತಿ ಇದ್ದರೆ, ಅವರೊಂದಿಗೆ ಹಂಚಿಕೊಳ್ಳಬಹುದು. (ಚಿತ್ರ: ಮೂಡಿಗೆರೆಯ ಚಿಟ್ಟ ಕಿತ್ತಳೆ : ಕೃಪೆ: ನಾಮಾಮಿ ಮಿತ್ರರು, ಸುಳ್ಯ).

# ರಾಷ್ಟ್ರಕವಿ ಕುವೆಂಪು ಅವರಲ್ಲಿನ ವೈಚಾರಿಕತೆ

## ತನ್ನಿಮಿತ್ತ

ಸುಮಾವೀಣಾ

vveditoped@gmail.com

ವಿಶ್ವಪ್ರಜ್ಞೆಯ ಲೇಖಕರಾಗಿ ಕನ್ನಡದಲ್ಲಿ ವಿಶ್ವ ಸಮಸ್ತವನ್ನೂ ಅಭಿವ್ಯಕ್ತಗೊಳಿಸಬೇಕೆನ್ನುವ ಮಹಾಕನಸನ್ನು ಹೊಂದಿದ್ದವರು ಕುವೆಂಪು. ತನ್ನಿಮಿತ್ತ ಕನ್ನಡ ಭಾಷಾ ಪರಿಸರವನ್ನು ಸಂವೇದನಶೀಲಗೊಳಿಸಿ ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯನ್ನಾಗಿಸಲು ಶ್ರಮಿಸಿದ ಕುವೆಂಪು ಪ್ರಾತಃಸ್ಮರಣೀಯರು. ವಸುಧೈವ ಕುಟುಂಬಕಂ ಎಂಬಂತೆ ವಿಶ್ವಕುಟುಂಬಿಗಳಾಗಲು ಬೇಕಾದ ವಾತಾವರಣ ನಿರ್ಮಿತಿಗೆ ಹಂಬಲಿಸಿ ಜಾಗತಿಕ ಪ್ರಜ್ಞೆ ಅನ್ನುವ ತುಡಿತಕ್ಕೇ ಅಕ್ಷರದ ದುಡಿಮೆ ಮಾಡಿದವರು. ಸಮಕಾಲೀನ ಬದುಕಿನಲ್ಲಿ ನಮ್ಮೊಡನೆ ಇರುವ ಸಚರಾಚರ ವಸ್ತುಗಳನ್ನೂ ಪ್ರೀತಿಸುವ ತಾಯ್ನೋಟದ ಜತೆಗೆ ಪರಿವರ್ತನಾಶೀಲ ಮನೋಧರ್ಮದ ವಿಚಾರಧಾರೆ ಇದ್ದದ್ದರಿಂದಲೇ ಕುವೆಂಪು ನಮಗೆ ಹೆಚ್ಚು ಹತ್ತಿರವಾಗುವುದು. 20ನೇ ಶತಮಾನದಲ್ಲಿ ಅಮೆರಿಕ ಮತ್ತು ರಷ್ಯಾ ನಡುವೆ ಪೈಪೋಟಿ ಇದ್ದಾಗ ಅಮೆರಿಕ ಮತ್ತು ಇತರ ಯೂರೋಪ್ ರಾಷ್ಟ್ರಗಳು ಕೈಗಾರಿಕಾ ಕ್ರಾಂತಿಯಲ್ಲಿ ತೊಡಗಿಸಿಕೊಂಡರೆ ರಷ್ಯಾ ಒಕ್ಕೂಟ ಹಸಿರು ಕ್ರಾಂತಿಯಲ್ಲಿ ಮೇಲುಗೈ ಸಾಧಿಸುತ್ತದೆ. ಅದೇ ಕಾಲಮಾನದಲ್ಲಿ ಕುವೆಂಪು ವಿಶ್ವಮಾನವ ಸಂದೇಶ ನೀಡುವುದರ ಮೂಲಕ ಕನ್ನಡದ ಘನತೆಯನ್ನು ಜಾಗತಿಕ ಮಟ್ಟಕ್ಕೆ ಒಯ್ದಿದ್ದಾರೆ.

ಆದರ್ಶದ ಮಾತುಗಳನ್ನು ಹೇಳಿ ಕೈಕಟ್ಟಿ ಕುಳಿತುಕೊಳ್ಳುವ ವ್ಯಕ್ತಿತ್ವದವರು ಕುವೆಂಪು ಆಗಿರಲಿಲ್ಲ. ನುಡಿದಂತೆ ನಡೆ' ಎಂಬಂತೆ ತನ್ನಾದರ್ಶದ ಮಾತುಗಳನ್ನು ತಾನೂ ಪರಿಪಾಲಿಸುತ್ತಿದ್ದರು. 'ಶಿಕ್ಷಣದ ಪ್ರಾಮುಖ್ಯತೆ', ಮೌಢ್ಯವನ್ನು ತಿರಸ್ಕರಿಸುವುದು', ಜಾತಿ, ಮತ, ಪಂಥಗಳನ್ನು ತೊಡೆಯುವುದು','ಸ್ತ್ರೀ ಸಮಾನತೆ ಎತ್ತಿ ಹಿಡಿಯುವುದು' ಕುವೆಂಪರವರ ವೈಚಾರಿಕತೆಯ ಪ್ರಮುಖಾಂಶಗಳಾಗಿದ್ದವು. ಇವಿಷ್ಟೂ ಒಂದಕ್ಷರವೂ ಲೋಪವಿಲ್ಲದಂತೆ ಇಂದಿಗೆ ಅನೂಚಾನವಾಗಿ ಅನ್ವಯವಾಗುತ್ತವೆ. ಬಂಗಾಳದಲ್ಲಿ ಮೌಢ್ಯ ವಿರೋಧಿ ಅಲೆ ಎಬ್ಬಿಸಿದವರು ಸ್ವಾಮಿವಿವೇಕಾನಂದರು ಹಾಗೆ ಕನ್ನಡದಲ್ಲಿ ಮೌಢ್ಯದ ವಿರುದ್ಧ ಗಟ್ಟಿಯಾಗಿ ಮಾತನಾಡಿ ತರ್ಕಬದ್ಧ ಸಾಮಾಜಿಕತನಕ್ಕೆ ಮುನ್ನುಡಿ ಬರೆದವರು ಕುವೆಂಪುರವರು. ಅದಕ್ಕೆ ಸಾಕ್ಷಿ ಅವರ ಜಲಗಾರ' ನಾಟಕ'. ಪಾಪಗಳ ಭೋಗಿಗಳ ಗೂಡಾಗಿರುವ' ದೇವಾಲಯಗಳ ಅನ್ಯಾಯವನ್ನು ಖಂಡಿಸಿ ಸ್ವತಃ ಜಲಗಾರನೇ ಶಿವನಾಗಿಬಿಡುವ ಚೋದ್ಯವನ್ನು ಈ ನಾಟಕದಲ್ಲಿ ಹೇಳಿದ್ದಾರೆ.. ಅನ್ಯಾಯ, ಅನಾಚಾರ, ಭ್ರಷ್ಟಾಚಾರದ ಗೂಡಾಗಿರುವ. ಕರ್ತವ್ಯನಿಷ್ಠೆಗೆ ದುರಿತದ ಕಾಲ ಇದಾಗಿರುವಾಗ ಕರ್ತವ್ಯದಲ್ಲಿಯೇ ದೇವರನ್ನು ಕಾಣುವ, ದೊರೆತದ್ದರಲ್ಲಿ ಸಂತೃಪ್ತಿ ಹೊಂದುವ ಭಾವನೆ ಇಂದಿನ ಸಾಮಾಜಿಕರಲ್ಲಿ ಕಿಂಚಿತ್ ಬಂದರೂ ಸಾಲದೇ? ಎನಿಸುತ್ತದೆ. ಕುವೆಂಪು ಮೂಲತಃ ಆಧುನಿಕ ವೈಚಾರಿಕತೆಯ ನಿಜ ಆರಾಧಕರು . ಮಲೆನಾಡಿನ ಬದುಕಿನ ಮಧ್ಯದಿಂದ ಎದ್ದುಬಂದ ಅವರಿಗೆ ವೈಚಾರಿಕತೆಯೇ ಆಚಾರವಾಗಿತ್ತು. ವೈಚಾರಿಕತೆಯನ್ನೇ ಮಲೆನಾಡ ಜಂಜಡಗಳಿಂದ ಮಲೆನಾಡಿಗರನ್ನು, ಇತರರನ್ನು ಬಿಡುಗಡೆಗೊಳಿಸುವ ಸಾಧನವಾಗಿ ಕಂಡರು. ಕುವೆಂಪುರವರ ಮಲೆನಾಡಿನ ಚಿತ್ರಗಳು' ಕೃತಿಯ ಅಣ್ಣಪ್ಪನ ರೇಷ್ಮೆ ಕಾಯಿಲೆ' ಎಂಬ ಅಧ್ಯಾಯದಲ್ಲಿ ಅಣ್ಣಪ್ಪ ನ್ಯುಮೋನಿಯಾಗೆ ತುತ್ತಾಗಿರುತ್ತಾನೆ. ಆದರೆ ಅಲ್ಲಿಯ ಜನ ಚೌಡಿಕಾಟವೆಂದು ಹರಕೆ ಹೊರುವುದು, ಭಸ್ಮ ಹಾಕುವುದು ಮಾಡುತ್ತಿದ್ದಾಗ ಕುವೆಂಪು ಸ್ವತಃ ಹೋಗಿ ನೋಡಿ ವೈದ್ಯರಿಗೆ ಕಾಗದ ಬರೆದು ಔಷಧಿ ತರಿಸುತ್ತಾರೆ ಮತ್ತವನಿಗೆ ಪಥ್ಯಕ್ಕೆ ಆಹಾರ ಪದಾರ್ಥಗಳನ್ನು ಕಳುಹಿಸುತ್ತಾರೆ ಇದು ಅವರ ಮೇರು ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ನಮ್ಮನ್ನು ಅನಾದಿ ಕಾಲದಿಂದ ಹುರಿದು ಮುಕ್ಕುತ್ತಿರುವ ಮೇಲು-ಕೀಳುಗಳ ವಿರುದ್ಧ ವಿವೇಕ ಮತ್ತು ಧೈರ್ಯವನ್ನು ವೈಚಾರಿಕತೆ ಮಾತ್ರ ಕಟ್ಟಿಕೊಡಬಲ್ಲದು ಎಂಬುದನ್ನು ಬಲವಾಗಿ ನಂಬಿದ್ದರು.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕನ್ನಡ ಲೇಖಕರಲ್ಲಿ ಕುವೆಂಪು ಅವರಷ್ಟು ವೈಚಾರಿಕ ಚಿಂತನೆಗಳನ್ನು ಹೇಳಿದವರು ಮತ್ತೊಬ್ಬರಿಲ್ಲ. ಹಾಗಾಗಿ ಕುವೆಂಪುರವರನ್ನು ಆಧುನಿಕ ವೈಚಾರಿಕತೆಯ ಅಧ್ವರ್ಯು ಎನ್ನಬಹುದು. ಇಲ್ಲಿನ ಮತಧರ್ಮಗಳು ಸೃಷ್ಟಿಮಾಡಿದ್ದ ಅವಿವೇಕವನ್ನು ಬಯಲು ಮಾಡುವ ವೈಚಾರಿಕ ಸಾಹಿತ್ಯ ಸೃಷ್ಟಿ ಮಾಡಿದ ಹೆಗ್ಗಳಿಕೆ ಇವರದು. ಅವರಿಗೆ ಧಿಕ್ಕಾರವಿದ್ದದ್ದು ಹಳೆಯ ಶಾಸ್ತ್ರ, ಸ್ವಾರ್ಥ ಪುರೋಹಿತಶಾಹಿ ವರ್ಗದ ಮೇಲೆ ಹೊರತು ನಿಜವಾದ ಧರ್ಮದ ಮೇಲೆ ಆಗಿರಲಿಲ್ಲ. ಧರ್ಮದ ಮೇಲೆ ಅವರಿಗೆ ನಿಜವಾಗಿಯೂ ಅಭಿಮಾನವಿತ್ತು. ಅದನ್ನು ಪೂರ್ಣಚಂದ್ರ ತೇಜಸ್ವಿಯವರು ಅಣ್ಣನ ನೆನಪು' ಕೃತಿಯಲ್ಲಿ ಪುರೋಹಿತರನ್ನು ಕರೆಸುತ್ತಿರಲಿಲ್ಲ ಆದರೆ ಪೂಜೆಗಳನ್ನು ಮಾಡುತ್ತಿದ್ದರು ಉಪನಿಷದ್ವಾಕ್ಯಗಳನ್ನು ಹೇಳಿಕೊಡುತ್ತಿದ್ದರು ಎಂದು ಬರೆದುಕೊಂಡಿದ್ದಾರೆ. ಕುವೆಂಪು ಗುಡಿ ಚರ್ಚು ಮಸೀದಿಗಳನ್ನು ಬಿಟ್ಟು ಹೊರಬನ್ನಿ ಎಂದು ಕರೆಕೊಟ್ಟರೂ ಎದೆಗುಡಿಯಲ್ಲಿರುವ ದೇವರುಗಳನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಹಂಬಲವನ್ನಿರಿಸಿಕೊಂಡವರು. ನೂರು ಮತದ ಹೊಟ್ಟನ್ನು ಗಾಳಿಯಲ್ಲಿ ತೂರಬೇಕು ಎಂದು ಕರೆಕೊಟ್ಟರೂ ಧಾರ್ಮಿಕಮಹತಿ ಎಂಬ ತಿರುಳನ್ನು ಎಲ್ಲರಿಗೂ ತಿಳಿಸಿದ, ನಿಷ್ಠುರವಾದಿಯಾಗಿ ಪುರೋಹಿತಶಾಹಿಯನ್ನು ಖಂಡಿತವಾಗಿ ಖಂಡಿಸಿದ ಇನ್ನೊಬ್ಬ ಕವಿ ನಮ್ಮಲ್ಲಿಲ್ಲ. ಕಾನೂರು ಹೆಗ್ಗಡತಿಯ' ಹೂವಯ್ಯ.ನ ಮುಖಾಂತರ ಜನತೆಯ ನಂಬುಗೆ ಲೋಕದಲ್ಲಿದ್ದ ನಯವಂಚಕತನವನ್ನು ಬಯಲಿಗೆಳೆದು ಕಡೆಗೆ ಅದೇ ಹೂವಯ್ಯ, ವಿರುವ ಅಧ್ಯಾತ್ಮದ ಔನ್ನತ್ಯವನ್ನು ವರ್ಣಿಸುವುದನ್ನು ಇಲ್ಲಿ ಉದಾಹರಿಸಬಹುದು..

ಕುವೆಂಪು ಮತವನ್ನು ಸಂಕುಚಿತವೆಂದು ಪರಿಭಾವಿಸಿ ಅಧ್ಯಾತ್ಮವನ್ನು ವಿಶಾಲಾರ್ಥದಲ್ಲಿ ಸಕಲ ಜೀವ ರಾಶಿಗಳ ಒಳಿತಿನಲ್ಲಿ, ಸಪ್ರೇಮ ಭಾವದಲ್ಲಿ ಕಂಡವರು ಎನ್ನಬಹುದು. ಜಗತ್ತಿನ ಕಲ್ಯಾಣವು ಪ್ರೀತಿ, ದಯಾ, ಕ್ಷಮಾ, ಅನುಕಂಪ ಎಂಬ ಶ್ರೇಷ್ಠ ಗುಣಗಳಲ್ಲಿ ಅಡಗಿದೆ ಹಾಗಾಗಿ ಮತದಿಂದ ಪಾರಾಗಿ ಅಧ್ಯಾತ್ಮಕ್ಕೆ ಶರಣಾಗಬೇಕೆಂಬ ಸಾರ್ವಕಾಲಿಕ ಕರೆಯನ್ನು ಕೊಟ್ಟವರು ಕುವೆಂಪು. ವಿಶ್ವಬಂಧುತ್ವದ ಪರಿಕಲ್ಪನೆ ಹೊಂದಿದ್ದ ಇವರು ಶ್ರೀಸಾಮಾನ್ಯನೆ ಭಗವನ್ನಾನ್ನಂ ಎನ್ನುವುದರ ಮೂಲಕ ಶ್ರೀ ಸಾಮಾನ್ಯನೂ ಶ್ರೇಷ್ಠವೆಂದು ಭಾವಿಸಿದವರು. ಮನುಜ ಮತ ವಿಶ್ವಪಥ ಎಂಬುದನ್ನು ತಮ್ಮ ಬರವಣಿಗೆಯ ಉದ್ದಕ್ಕೂ ನಿರೂಪಿಸಿ ಮುಂದಿನ ಪೀಳಿಗೆಗೂ ಸ್ಫೂರ್ತಿಯಾಗಿದ್ದಾರೆ.

21ನೆ ಶತಮಾನದಲ್ಲೂ ಸಾಮಾಜಿಕ ಏರುಪೇರಿಗೆ ಕಾರಣವಾಗಿರುವುದು ಜಾತಿಪದ್ಧತಿ', 'ಇಂಗ್ಲಿಷ್ ಭಾಷೆ' ಮತ್ತು ಆಸ್ತಿ ವ್ಯವಸ್ಥೆ' ಇವನ್ನು ಕುವೆಂಪುರವರೂ ಬಹಳ ಹಿಂದೆಯೇ ಮನಗಂಡು ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು ಯುಗಚಕ್ರಪರಿವರ್ತನೆಗೆ ಸರ್ವರೂ ಹೆಗಲುಕೊಟ್ಟು ಒಮ್ಮನಸು ಮಾಡಿ ಎಂದಿದ್ದು ಕೇವಲ ಪದ್ಯದ ಸಾಲುಗಳಲ್ಲ. ಈ ಕ್ಷಣಕ್ಕೂ ಅನ್ವಯಿಸುವ ಮಾತುಗಳು. 1974ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಅವರಾಡಿದ ಮಾತುಗಳು ಭೌದ್ಧಿಕ ಚಿಂತನೆಯ ಅಡಿಪಾಯದ ಪ್ರಾಮುಖ್ಯತೆಯನ್ನು ಹೇಳುತ್ತದೆ. ವಿದ್ಯಾರ್ಥಿ ಜೀವನದಿಂದ ಉತ್ತೀರ್ಣರಾಗಿ ಬದುಕಿನ ಮಜಲಿಗೆ ಕಾಲಿಡುತ್ತಿದ್ದ ಯುವಕರನ್ನು ಉದ್ದೇಶಿಸಿ ವಿಚಾರ ಕ್ರಾಂತಿಗೆ ಆಹ್ವಾನ ಕೊಟ್ಟಿದ್ದು ಆ ಕಾಲಕ್ಕೂ ಹೊಂದಿಕೆಯಾಗಿತ್ತು. ಹಾಗೆ ಯಾವುದೇ ಸೂಕ್ತ ನಿರ್ಧಾರಕ್ಕೆ ಬರಲಾಗದೆ, ಆತ್ಮಸ್ಥೈರ್ಯ ಕಳೆದುಕೊಂಡು, ಕೀಳರಿಮೆ ಎಂಬ ಸಾಮೂಹಿಕ ಸನ್ನಿಗೆ ಒಳಗಾಗಿರುವರಿಗೆ ಅನ್ವಯಿಸುತ್ತದೆ.

ಬೆರಳ್ಗೆ ಕೊರಳ್ ನಾಟಕದಲ್ಲಿ ಬೆರಳನ್ನು ಕಳೆದುಕೊಂಡ ಮಗನಿಗೆ ಬೆಳಗಿನ ಉಣಿಸನ್ನು ನೀಡಲೆಂದು ಬಂದ ಅಬ್ಬೆ ಆಡುವ ಮಾತುಗಳೂ ಇಂದಿನ ಬಂಡವಾಳಶಾಹಿ, ಸ್ವಾರ್ಥಕುತ್ಸಿತ ಮನಸ್ಥಿತಿಯನ್ನು ಅಣಕವಾಡುವಂತಿದೆ. ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ತಿಮ್ಮಿಯನ್ನು ಅವಳಪ್ಪದ ಗುತ್ತಿಯೊಡನೆ ಕಳುಹಿಸಿಕೊಡುವ ಸೇಸಿ, ಹಾಗೆ ಸಾಲಮಾಡಿ ಮಗಳಮದುವೆಗೆ ಆಭರಣಗಳನ್ನು ಖರೀದಿಸಿದ ದೊಡ್ಡಬೀರ ಪಡುವ ತಲ್ಲಣಗಳು ಇಂದಿಗೂ ಇವೆ.

ಶೂದ್ರತಪಸ್ವಿ' ನಾಟಕದಲ್ಲಿ ವ್ಯಕ್ತಿ ಮತ್ತು ಭೈರವ ಎಂಬೆರಡು ಹೊಸ ಪಾತ್ರಗಳನ್ನು ಸೃಷ್ಟಿಸಿ ಆ ಮೂಲಕ ಹೊಸ ಹೊಳಹನ್ನು ಆ ಮೂಲಕ ಅನ್ಯಾಯವನ್ನು ಖಂಡಿಸುವ ಯತ್ನ ಮಾಡಿದ್ದಾರೆ ಇದಕ್ಕೆ ಉದಾಹರಣೆ ಶೂದ್ರ ತಪಸ್ವಿ ನಾಟಕದಲ್ಲಿಯೇ ಸಿಗುತ್ತದೆ. ವಾಲ್ಮೀಕಿ ರಾಮಾಯಣ, ಭವಭೂತಿಯ ಉತ್ತರರಾಮಚರಿತದಲ್ಲಿ ಶಂಬೂಕ ಮಹರ್ಷಿಯ ವಧೆಯಾಗುತ್ತದೆ ಇಲ್ಲಿ ಶೂದ್ರ ತಪಸ್ವಿ ನಾಟಕದಲ್ಲಿ ಹಾಗಾಗುವುದಿಲ್ಲ ಸತ್ತ ಬಾಲಕ ಕೂಡ ಮರಳಿ ಬದುಕುತ್ತಾನೆ ನಾಟಕ ಸುಖಾಂತ್ಯವಾಗುತ್ತದೆ. ಕುವೆಂಪುರವರ ಹೊಸ ಪಾತ್ರಗಳನ್ನು ಅನ್ಯಾಯಕ್ಕೊಳಗಾಗುವವರ ತಲೆ ಕಾಯುವ ಪಾತ್ರಗಳು ಎನ್ನಬಹುದು. ಈ ರೀತಿ ನ್ಯಾಯದ ಪರವಾಗಿ ನಿಲ್ಲುವ ಮನಸ್ಸುಗಳು ಪ್ರಸ್ತುತ ಸಮಾಜಕ್ಕೆ ಅಗತ್ಯವಿದೆ.

ಇವರ ವೈಚಾರಿಕತೆಯ ಇನ್ನೊಂದು ಪರಿಪ್ರೇಕ್ಷ್ಯ ಎಂದರೆ ಮಂತ್ರಮಾಂಗಲ್ಯ. ಅದ್ದೂರಿತನ , ದುಂದುವೆಚ್ಚವನ್ನು ಖಂಡಿಸಿ ಸರಳವಿವಾಹದ ಕಲ್ಪನೆಯ ಅರ್ಥಪೂರ್ಣ ಚೌಕಟ್ಟು ಇವರಿಂದಲೇ ಬಂದಿರುವುದು. ಇಲ್ಲಿ ಕುವೆಂಪು ಅವರ ಭಾವನೆಗಳು ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ಆಶಯಗಳು ಒಂದೇ ಆಗಿರುವುದನ್ನು ಗಮನಿಸಬಹುದು. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂಬಂತೆ ಇವರೂ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಿದ್ದಾರೆ ಇಂದಿಗೂ ಈ ರೀತಿಯ ಸರಳವಿವಾಹಗಳು ಆಗುವುದನ್ನು ನೋಡಬಹುದು. ರಾಮಾಯಣ ದರ್ಶನಂ'ನಲ್ಲಿ ಪಾಪಿಗಳಿಗೂ ಉದ್ಧರಮಿಹುದು ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್ ಎಂದಿರುವುದು ಪರಿವರ್ತನೆಗೆ ಎಲ್ಲರಿಗೂ ಅವಕಾಶ ಮಾಡಿಕೊಡಬೇಕೆಂದು ಇದೂ ವೈಚಾರಿಕತೆಯ ಮುನ್ನೋಟವೇ ಸರಿ.

ಬೇಲೂರಿನ ಶಿಲ್ಪಗಳನ್ನು ಕಂಡು ಶಿಲೆಯಲ್ಲ ಕಲೆಯ ಬಲೆ ಎಂದಿರುವಲ್ಲಿ ಆ ಶಿಲ್ಪವನ್ನು ಮಾಡಿದ ಒಬ್ಬೊಬ್ಬ ಶಿಲ್ಪಿಗೂ ಧನ್ಯವಾದಗಳನ್ನು ಹೇಳುತ್ತಾರೆ. ಎಂದರೆ ಸೌಂದರ್ಯದ ಮೂಲವನ್ನು ಹುಡುಕಿ ಅದಕ್ಕೆ ಕಾರಣರಾದವರಿಗೆ ತುಂಬು ಮನಸ್ಸಿನಿಂದ ಧನ್ಯವಾದಗಳನ್ನು ಹೇಳುವ ಕೃತಾರ್ಥ ಭಾವ ಮೆರೆದು ಸಮಾಜದ ಎಲ್ಲ ಸ್ತರದವರಿಗೂ ಅರ್ಹತೆಯದ್ದಲ್ಲಿ ಗೌರವ ಸಲ್ಲಲೇ ಬೇಕು ಎಂಬ ವಿಚಾರವನ್ನು ಅರುಹಿದ್ದಾರೆ.ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ರಾಜಕಾರಣಿಯೊಬ್ಬರಿಗೆ ಸಡ್ಡುಹೊಡೆದು ಮಂತ್ರಕಣಾ! ಶಕ್ತಿಕಣಾ! ತಾಯಿಕಣಾ! ದೇವಿಕಣಾ! ಎಂದು ಭಾಷಾಭಿಮಾನವನ್ನು ತೋರಿಸಿದ್ದರು.. ಅಂದು ಅವರು ಹೇಳಿದ ಮಾತುಗಳನ್ನು ಉದ್ಘೋಷವನ್ನಾಗಿಸಿಕೊಂಡು ಇಂದಿಗೆ ಹೋರಾಟ ಮಾಡಬೇಕಾದ ಅನಿವಾರ್ಯತೆಗೆ ಪ್ರಸ್ತುತ ವಿದ್ಯಮಾನಗಳು ಸಾಕ್ಷಿಯಾಗುತ್ತಿರುವುದನ್ನು ನಾವು ಗಮನಿಸಬಹುದು.

ಈ ಕಾಲಘಟ್ಟದ ಜನರಲ್ಲಿ ವ್ಯಷ್ಟಿಪ್ರಜ್ಞೆ ಇದೆಯೇ ವಿನಃ ಸಮಷ್ಟಿಪ್ರಜ್ಞೆ ಇಲ್ಲ. ಇದಕ್ಕೆ ತದ್ವಿರುದ್ಧರಾಗಿದ್ದವರು ಕುವೆಂಪು. ಯಾವುದೇ ಪಂಥ ಇಸಮ್ಗಳಿಗೆ ಒಳಗಾಗದೆ ಓ ನ್ನ ಚೇತನಾ , ಆಗು ನೀ ಅನಿಕೇತನಾ ಎಂದು ಸಮಷ್ಟಿ ಭಾವಕ್ಕೆ ಶರಣಾಗಿ ಉದಾತ್ತರಾಗಿದ್ದಾರೆ.

ಸಾಮಾಜಿಕ ವೈರುಧ್ಯಗಳಿಗೆ ವೈಚಾರಿಕತೆಯೇ ಮದ್ದು ಎಂದವರು ಕುವೆಂಪು. ವಾಸ್ತವಸಂಗತಿಗಳನ್ನು ಹೊಸ ಪಾತ್ರಸೃಷ್ಟಿಯ ಮೂಲಕ ಅರುಹಿ ಅದೇ ನೆಲೆಯಲ್ಲಿ ಪರಿಹಾರವನ್ನೂ ಸೂಚಿಸಿದವರು. ಸಮಾನತೆಯನ್ನು ತರುವ,ದಬ್ಬಾಳಿಕೆ ಶೋಷಣೆಯನ್ನು ನಿಗ್ರಹಿಸುವ ಮೌಢ್ಯತೆಯನ್ನು ತೊಡೆದು ವೈಜ್ಞಾನಿಕವಾಗಿ ಆರೋಗ್ಯಪೂರ್ಣವಾಗಿ ಯೋಚಿಸುವ ವಿಚಾರಲಹರಿಗಳನ್ನು ನಿರಂತರ ಲಹರಿಸಿ ನಿತ್ಯ ವೈಚಾರಿಕನಾಗಿ ತಮ್ಮ ಕೃತಿಗಳ ಮೂಲಕ ನಮ್ಮ ನಡುವೆ ಬದುಕಿರುವ ಕುವೆಂಪುರವರ ವೈಚಾರಿಕತೆ ಇಂದಿಗೂ ಅತ್ಯಂತ ಪ್ರಸ್ತುತ.

# ಮತ್ತಿನ ಸುದ್ದಿ ಗಮ್ಮತ್ತಿಗಷ್ಟೇ ಸೀಮಿತವಾಗದಿರಲಿ



ಶಿಶಿರ ಕಾಲ

ಶಿಶಿರ್ ಹೆಗಡೆ
shishirh@gmail.com

ಡ್ರಗ್ಸ್ ..ಡ್ರಗ್ ಪೆಡ್ಲರ್.. ಕೆಲ ದಿನಗಳಿಂದ ಈ ಎರಡು ಶಬ್ದವನ್ನು ದಿನಕ್ಕೆ ಹತ್ತಾರು ಬಾರಿ ಕೇಳಿರುತ್ತೀರಿ. ಮೊದಲೆಲ್ಲ ಡ್ರಗ್ಸ್ ಹಾವಳಿ ಪಂಜಾಬಿನಲ್ಲಿದೆಯಂತೆ, ದೆಹಲಿಯಲ್ಲಿದೆಯಂತೆ – ಮುಂಬೈ ಗೋವಾ ದಲ್ಲಿ ಎಲ್ಲ ಖುಲ್ಲಾ ಖುಲ್ಲಾ ಅಂತೆ ಎಂಬಿತ್ಯಾದಿ ಅಂತೆ ಕಂತೆಗಳ ಸುದ್ದಿ ಕೇಳುತ್ತಿದ್ದೆವು. ಈ ರೀತಿ ಹರಿದು ಬರುವ ಸುದ್ದಿಗೆ ಅಪ್ಪ ಅಮ್ಮ ಇರುತ್ತಿರಲಿಲ್ಲ, ಯಾವ ರಾಜ್ಯದಲ್ಲಿ, ಎಷ್ಟರ ಮಟ್ಟಿಗೆ ಡ್ರಗ್ಸ್ ಸಮಸ್ಯೆ ಇದೆ ಎಂದು ಯಾರಿಗೂ ಅಂದಾಜು ಹತ್ತುತ್ತಿರಲಿಲ್ಲ. ಮುಂಬೈ ನ ಅಂಡರ್‌ವರ್ಲ್ಡ್‌ನ ಸುದ್ದಿ ಯ ಜೊತೆ ಜೊತೆಯೇ ಡ್ರಗ್ಸ್ ಸುದ್ದಿ ಕೇಳಿ ಬರುತ್ತಿದ್ದರಿಂದ ಮುಂಬೈನಲ್ಲಿ ಅತಿ ಹೆಚ್ಚು ಡ್ರಗ್ಸ್ ಸಮಸ್ಯೆ ಉಂಟೇನೋ ಎಂದೆನಿಸುತ್ತಿತ್ತು. ನಂತರ 'ಉಡ್ತಾ ಪಂಜಾಬ್' ಎನ್ನುವ ಚಲನ ಚಿತ್ರ ಬಂತು. ಈ ಚಿತ್ರ ನೋಡಿದವರೆಲ್ಲ ಸಮಸ್ಯೆ ಮುಂಬೈ ನಲ್ಲಿ ಅಷ್ಟಿಲ್ಲ –ಬದಲಿಗೆ ಪಾಕಿಸ್ತಾನಕ್ಕೆ ಅಂಟಿಕೊಂಡಿರುವ ಪಂಜಾಬಿನಲ್ಲಿ ಅತಿ ಹೆಚ್ಚು – ಪಂಜಾಬಿನ ಸರದಾರ್ ಯುವಕರೆಲ್ಲ ನಶೇಡಿ ಎಂದೇ ಭಾವಿಸುವಂತಾಯಿತು. ಅದಕ್ಕೆ ಪೂರಕವಾಗಿ ಕೆಲವು ಪಂಜಾಬಿಗೆ ಡ್ರಗ್ಸ್ ಗೆ ಸಂಬಂಧಿಸಿದ ಡಾಕ್ಯುಮೆಂಟರಿಗಳು ಕೂಡ ಬಂದವು. ನಮ್ಮಲ್ಲಿ ಕೆಲವೊಮ್ಮೆ ಸುದ್ದಿಗಿಂತ ಕಾಲ್ಪನಿಕ ಚಲನಚಿತ್ರವನ್ನೇ ನಾವು ಹೆಚ್ಚು ನಂಬಿಬಿಡುತ್ತೇವೆ. ಅದರಲ್ಲಿಯೂ ಒಂದು ಅನುಮಾನ ವಿದ್ದು ಅದೇ ವಿಷಯದ ಮೇಲೆ ಒಂದು ಚಲನ ಚಿತ್ರ ಮೂಡಿ ಬಂದರೆ ಮುಗಿದೇಹೋಯಿತು, ಅದೇ ಸತ್ಯ ಎಂದು ವ್ಯತಿರಿಕ್ತವನ್ನೇ ನಂಬುವವರು ನಾವು. ಕಾಲ್ಪನಿಕ ಎಂದು ಪರದೆಯಲ್ಲಿ ಮೊದಲೇ ಬರೆದು ತೋರಿಸಿದರೂ ಅದೇ ಸತ್ಯ – ಸುಮ್ಮನೆ ಕಾಟಾಚಾರಕ್ಕೆ ಹಾಗೆ ಹಾಕುತ್ತಾರೆ ಎಂದೆಲ್ಲ ತಿಳಿದುಕೊಳ್ಳುವಷ್ಟು ಬುದ್ಧಿವಂತರು ನಾವು.

ಅಮೆರಿಕದಲ್ಲಿ ಅರವತ್ತರ ದಶಕದಲ್ಲಿ ಎಲ್ಲಿಲ್ಲದ ಸಮಸ್ಯೆ ಈ ಡ್ರಗ್ಸ್‌ನಿಂದಾಗಿ ಉಂಟಾಗಿತ್ತು. ಯುವಜನತೆ ಬೇಕಾ ಬಿಟ್ಟಿ ಡ್ರಗ್ ಸೇವಿಸಲು ಶುರುಮಾಡಿಕೊಂಡರು. ಅಮೆರಿಕದ ಅರವತ್ತರ ದಶಕದ ಹಿಪ್ಪಿ ಸಂಸ್ಕೃತಿಯ ಬಗ್ಗೆ ಕೇಳಿರುತ್ತೀರಿ. ಡ್ರಗ್ಸ್, ಸಂಗೀತ, ಮೋಜು, ಮುಕ್ತ ಸೆಕ್ಸ್ ಅನ್ನು ಅಂದಿನ ಅಮೆರಿಕನ್ ಯುವಜನತೆ ನೆಚ್ಚಿಕೊಂಡರು. ಅಲ್ಲಿಯವರೆಗೆ ದುಡಿದು ತಿನ್ನುತ್ತಿದ್ದ ಯುವಜನತೆ ಒಂದು ಸಂಸ್ಕಾರಹೀನವನ್ನು ತನ್ನದಾಗಿಸಿಕೊಂಡಿತ್ತು. ಇದೊಂದು ಸಮಸ್ಯೆ ಎಂದು ಅಂದಾಜಾಗುವ ಮೊದಲೇ ಅಮೆರಿಕ ಯುವಜನತೆ ಸ್ವೇಚ್ಛಾಚಾರಕ್ಕೆ ಇಳಿದುಬಿಟ್ಟಿತ್ತು. ಇದೇ ಕಾರಣಕ್ಕೆ ಅಂದಿನ ಅಮೆರಿಕ ಅಧ್ಯಕ್ಷ ಡ್ರಗ್ಸ್‌ನ ವಿರುದ್ಧ ಯುದ್ಧ ಎಂದು ಹೊರಟರು. ಜಗತ್ತಿನ ಎಲ್ಲ ರಾಷ್ಟ್ರಗಳ ಮುಖ್ಯಸ್ಥರನ್ನು ಒಟ್ಟುಗೂಡಿಸಿ ಇಪ್ಪತ್ತೈದು ವರ್ಷದೊಳಗೆ ಡ್ರಗ್ಸ್‌ಗಳನ್ನು ನಿಷೇಧಿಸುವಂತೆ ಮನವಿ ಮಾಡಿ, ಒಂದೊಮ್ಮೆ ಹಾಗೆ ನಿಯಂತ್ರಿಸದಿದ್ದಲ್ಲಿ ನಿಮ್ಮ ಕಥೆಯೂ ನಮ್ಮ ದೇಶದಂತೇ ಆಗುತ್ತದೆ ಎಂದು ಕಿವಿಮಾತು ಹೇಳಿ ಬೀಳ್ಕೊಟ್ಟರು. ಅಮೆರಿಕದಲ್ಲುಂಟಾದ ಸಮಸ್ಯೆಯನ್ನು ಮನಗೊಂಡ ಎಲ್ಲ ರಾಷ್ಟ್ರಗಳು ಬಹುತೇಕ ಡ್ರಗ್ಸ್‌ಗಳನ್ನು ನಿಷೇಧಿಸಿದವು. ಅಂದು ತಲೆ ಅಳಿಡಿಸಿಕೊಂಡು ಬಂದ ಭಾರತ ಇಪ್ಪತ್ತ ನಾಲ್ಕು ವರ್ಷದವರೆಗೆ ಏನೂ ಮಾಡದೇ ಸುಮ್ಮನಿದ್ದು ಕೊನೆಯಲ್ಲಿ ಇಪ್ಪತ್ತೈದನೇ ವರ್ಷ ಎನ್.ಡಿ.ಪಿ.ಎಸ್ ಆಕ್ಟ್ ಅನ್ನು ಗಡಿಬಿಡಿಯಲ್ಲಿ ಜಾರಿಗೊಳಿಸಿತು. ಡ್ರಗ್ಸ್‌ನೊಂದಿಗೆ ಸಿಕ್ಕಿಬಿದ್ದರೆ ಮರಣದಂಡನೆಯ ಹೊರತು ಬೇರೆ ಯಾವುದೇ ಶಿಕ್ಷೆಯನ್ನು ನ್ಯಾಯಾಧೀಶರು ವಿಧಿಸುವಂತಿಲ್ಲ ಎಂಬ ಕಠಿಣ ಕಾನೂನು ಜಾರಿಗೆ ಬಂದಿತು. ಹೀಗೊಂದು ಕಾನೂನು ಬಂದದ್ದೇನೋ ನಿಜ ಆದರೆ ಯಾರೊಬ್ಬರನ್ನೂ ಈ ಡ್ರಗ್ಸ್ ಕಾರಣದಿಂದ ಫಾಸಿಗೆ ಗುರಿಯಾಗಿಸಲಿಲ್ಲ ಎನ್ನುವುದು ಬೇರೆ ವಿಚಾರ. ನಂತರ ಬಹುಷಃ 2014ರಲ್ಲಿ ಈ ಕಡ್ಡಾಯ ಗಲ್ಲು ಎನ್ನುವ ಕಾನೂನು ಬದಲಾಯಿತು. ಈ ಆಕ್ಟ್ ಇಂದಿಗೂ ಕಾನೂನು ಪುಸ್ತಕದಲ್ಲಿ – ಸಂವಿಧಾನದಲ್ಲಿ ತೀರಾ ಕಠಿಣವಾದದ್ದು. ಈ ಕಾನೂನಿನನ್ವಯ ಯಾರನ್ನು ಬೇಕಾದರೂ ವಿಚಾರಣೆಗೆ ಕರೆಯಬಹುದಾದ ತಾಕತ್ತನ್ನು ವಿಚಾರಣಾ ಅಧಿಕಾರಿಗೆ ಕಾನೂನು ನೀಡುತ್ತದೆ. ಆರೋಪಿ ನಿರಪರಾಧಿ ಎಂದು ಪಕ್ಕಾ ಸಾಬೀತಾದರೆ ಮಾತ್ರ, ಬೇಲ್ ಸಿಗುವ ಕೆಲವೇ ಕಾನೂನುಗಳಲ್ಲಿ ಇದು ಕೂಡ ಒಂದು. ಉಳಿದ ಎಲ್ಲ ಕಾನೂನು ಆರೋಪಿ ಅಪರಾಧಿಯೆಂದು ಸಾಬೀತಾಗುವವರೆಗೆ ಕೇವಲ ಆರೋಪಿ. ಆದರೆ ಈ ಕಾನೂನಿನಲ್ಲಿ ಮಾತ್ರ ನಿರಪರಾಧಿ ಎಂದು ಸಾಬೀತಾದ ಮೇಲೆಯೇ ಬಿಡುಗಡೆ.

ಕಾನೂನೇನೋ ಇದೆ ಆದರೆ ಎಷ್ಟರ ಮಟ್ಟಿಗೆ ಆ್ಯಂಟಿ- ಡ್ರಗ್ ಸಂಸ್ಥೆಗಳು ಡ್ರಗ್ ನ ನಿಯಂತ್ರಣದತ್ತ ಕೆಲಸಮಾಡುತ್ತಿವೆ ಎನ್ನುವ ಪ್ರಶ್ನೆಗೆ ಸಮಂಜಸ ಉತ್ತರ ಸಿಗುವುದಿಲ್ಲ. ಇಂದು ಈ ಡ್ರಗ್ ಸಿನಿಮಾ ತಾರೆಯರು ಭಾಗಿಯಾಗಿರಬಹುದು ಎಂಬ ಏಕೈಕ ಕಾರಣಕ್ಕೆ ಇಷ್ಟು ಸುದ್ದಿಯಲ್ಲಿದೆ. ಅದೇ ಒಂದು ವೇಳೆ ಯಾರೋ ಮಂಜು, ಅಬ್ದುಲ್ ಅಥವಾ ಫರ್ನಾಂಡಿಸ್ ಬಂಧನವಾಗಿದ್ದರೆ ಅಥವಾ ಸಮನ್ ಮಾಡಿ ಪೊಲೀಸರು ಕರೆದಿದ್ದರೆ ಇದೆಲ್ಲ ಪತ್ರಿಕೆಯ ಯಾವುದೋ ಒಂದು ಚಿಕ್ಕ ಬಾಕ್ಸ್‌ನಲ್ಲಿ ಸುದ್ದಿಯಾಗಿ ನಮಗೆಲ್ಲ ಗೊತ್ತೇ ಆಗುತ್ತಿರಲಿಲ್ಲ – ಟಿವಿ ಮಾಧ್ಯಮಗಳು ಇದನ್ನು ಫಿಲ್ಲರ್ ಸುದ್ದಿಯಂತೆ ಬಳಸಿಕೊಳ್ಳುತ್ತಿದ್ದವೇನೋ. 2004ರಲ್ಲಿಯೇ ಅಮೆರಿಕದ ರಾಷ್ಟ್ರೀಯ ಸಂಸ್ಥೆಯು. ಎಸ್.ಎನ್.ಐ.ಎಚ್ ಭಾರತದಲ್ಲಿ ಡ್ರಗ್ಸ್ ಅವ್ಯವಹಾರ ಮತ್ತು ಹಾವಳಿ ಎಲ್ಲಿಲ್ಲದಂತೆ ಹೆಚ್ಚುತ್ತಿದೆ ಎಂದು ವರದಿ ಮಾಡಿತ್ತು. ಆ ವರದಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿದ್ದರೂ ಹೆಚ್ಚಿನ ಭಾರತೀಯರಿಗೆ ಆ ಸುದ್ದಿ ತಲುಪಲೇ ಇಲ್ಲ. ಅಂದಿನ ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳುವುದರ ಬದಲು ಭಾರತದ ಮತ್ತು ಸರಕಾರದ ಮಾನ ಮರ್ಯಾದಿ ಕಾಪಾಡಿಕೊಳ್ಳುವ ಸಲುವಾಗಿಯೋ ಏನೋ, ಈ ವರದಿ ಬಹಿರಂಗ ಪಡಿಸದಂತೆ ಅಮೆರಿಕವನ್ನು ಕೇಳಿಕೊಂಡಿತ್ತು.

ಸಿನಿಮಾ ತಾರೆಯರಿರಬಹುದು ಅಥವಾ ಯಾವುದೇ ಪಬ್ಲಿಕ್ ಫಿಗರ್‌ಗಳಿರಬಹುದು – ಅವರನ್ನು ಜನಸಾಮಾನ್ಯ ತಲುಪುವುದೇ ಕಷ್ಟ. ಅಂಥದ್ದರಲ್ಲಿ ಡ್ರಗ್ ದಂಧೆಯವರು ಅವರನ್ನು ತಲುಪಿದ್ದಾರೆ ಮತ್ತು ಅವರೊಂದಿಗೆ ಡೀಲ್‌ಗೆ ಇಳಿದಿದ್ದಾರೆ ಎಂದರೆ ಇದೆಲ್ಲ ಒಂದು ವ್ಯವಸ್ಥಿತ ಮತ್ತು ಬೆಳೆದು ನಿಂತ ಜಾಲವಾಗಿದೆ ಎಂದೇ ನಾವು ಪರಿಗಣಿಸಬೇಕು. ಇಷ್ಟೆಲ್ಲಾ ನಡೆಯುತ್ತಿದ್ದಾಗ – ಈ ರೀತಿಯ ಕಠಿಣಾತಿ ಕಠಿಣ ಕಾನೂನು ಭಾರತದಲ್ಲಿರುವಾಗ ಅದು ಹೇಗೆ ಈ ಜಾಲ – ದುರ್ವ್ಯವಸ್ಥೆ ಈ ರೀತಿ ಹೆಮ್ಮರವಾಗಿ ಬೆಳೆದು ನಿಂತಿತು ಎನ್ನುವುದನ್ನು ಯಾರು ಯಾರಿಗೆ ಪ್ರಶ್ನಿಸಬೇಕು? ಡ್ರಗ್ ಸೇವಿಸುವುದು ಅಪರಾಧ. ಆದರೆ ಸೇವಿಸಿದವರು ಯಾರೂ ಮನೆಯಲ್ಲಿ ತಯಾರಿಸಿಕೊಂಡು ಸೇವಿಸಿಲ್ಲವಲ್ಲ. ಇಂದು ಬಂಧಿತರಾದವರು ಒಂದೋ ಡ್ರಗ್ ತೆಗೆದುಕೊಂಡರೆಂಬ ಆರೋಪಿತರು ಅಥವಾ ತೆಗೆದುಕೊಂಡವರಿಗೆ ತಲುಪಿಸಿದವರು. ಮೂಲದಲ್ಲಿ ಭಾರತದಲ್ಲಿ ಈ ಡ್ರಗ್ಸ್ ಎಲ್ಲಿ ತಯಾರಾಗುತ್ತಿದೆ – ಅಥವಾ ಭಾರತದೊಳಗೆ ಈ ಡ್ರಗ್ ಹೇಗೆ ಒಳ ನುಸುಳುತ್ತಿದೆ ಎಂಬ ಅಸಲೀ ಬೇಸಿಕ್ ಪ್ರಶ್ನೆಯತ್ತ ಯಾರೂ ತಲೆಯೇ ಕೆಡಿಸಿಕೊಂಡಂತಿಲ್ಲ.

ಒಂದೊಂದು ಡ್ರಗ್ ಒಂದೊಂದು ರೀತಿ ಕೆಲಸ ಮಾಡುತ್ತದೆ – ಬೇರೆ ಬೇರೆ ರೀತಿಯ ನಶೆಯನ್ನೇ ನೀಡುತ್ತದೆ – ಚಟದಾಸ್ಯಕ್ಕೆ ದೂಡುತ್ತದೆ. ಒಂದೊಂದರ ವ್ಯತಿರಿಕ್ತ ಪರಿಣಾಮ ಒಂದೊಂದು ರೀತಿ. ಡ್ರಗ್ಸ್ ಮದ್ಯಪಾನದಂತಲ್ಲ, ಮದ್ಯಪಾನದಲ್ಲಿ ನೂರಾರು ರೀತಿಗಳಿದ್ದರೂ ಹೆಚ್ಚು ಕಡಿಮೆ ಅದನ್ನು ಕುಡಿದಾಗ ಆಗುವ ಪರಿಣಾಮ ಒಂದೇ. ತಂಬಾಕು ವ್ಯಸನ ಕೂಡ ಹಾಗೆಯೇ. ಆದರೆ ಡ್ರಗ್ಸ್ ಎನ್ನುವುದು ವೈವಿಧ್ಯವಾದದ್ದು.ಕೆಲವು ಹೆಚ್ಚು ಅಡಿಕ್ಟಿವ್. ಅವು ಮನುಷ್ಯನ ಮೆದುಳಿನ ಮೇಲೆ ಬೀರುವ ಪರಿಣಾಮ ಕೂಡ ಬೇರೆಯೇ. ಉದಾಹರಣೆಗೆ ಗಾಂಜಾ ಮನುಷ್ಯನ ವೈಚಾರಿಕತೆಯನ್ನು, ನಗುವನ್ನು, ಖುಷಿಯನ್ನು ಉದ್ರೇಕಿಸುತ್ತದೆ. ಗಾಂಜಾ ಸೇವಿಸುವುದರಿಂದ ಬೇರೆ ಅಡ್ಡ ಪರಿಣಾಮಗಳು ಉಳಿದ ಡ್ರಗ್ಸ್‌ಗೆ ಹೋಲಿಸಿದರೆ ಕಡಿಮೆಯೇ. ಆ ಕಾರಣಕ್ಕೇ ಗಾಂಜಾ ಸಾಫ್ಟ್ ಡ್ರಗ್ ಎಂದು ಕರೆಯಲ್ಪಡುತ್ತದೆ. ಗಾಂಜಾ ಸೇವಿಸಿದ ಯಾರೊಬ್ಬರೂ ಮಾರನೆಯ ದಿನವೇ ಅದರ ಚಟಕ್ಕೆ ಬಿದ್ದು ಬಿಡುವುದಿಲ್ಲ. ಗಾಂಜಾ ಕೆನಡಾ ಮತ್ತು ಅಮೆರಿಕದ ಹನ್ನೊಂದು ರಾಜ್ಯಗಳಲ್ಲಿ ಇಂದು ಲೀಗಲ್. ಗಾಂಜಾ ಹಾಗೆ ನೋಡಿದರೆ ಕಾಟು ಗಿಡದ ಹೂವು ಮತ್ತು ಎಲೆ. ಸ್ವಲ್ಪವೇ ಶುದ್ಧೀಕರಿಸಿ ಬಳಸುವಂಥ ಗಿಡಮೂಲಿಕೆ. ಗಾಂಜಾ ಗಿಡವನ್ನು ಮಾನಸಿಕ ಸಮಸ್ಯೆಗಳಿಗೆ ಮತ್ತು ಕೃತಕ ಮತ್ತು ಬರಿಸಲು ಆದಿಕಾಲದಿಂದ ವೈದ್ಯಕೀಯ ಕಾರಣಕ್ಕೆ ಬಳಕೆಯಲ್ಲಿದೆ. ಶಿವ ಉಪಾಸಕರು, ಅಘೋರಿಗಳು ಇಂದಿಗೂ ಗಾಂಜಾ ಬಳಸುವುದು ಬಹಳ ಸಾಮಾನ್ಯ. ಕುಂಭಮೇಳವೆಂದರೆ ಎದುರಿಗೆ ಬರುವ ಚಿತ್ರಣವೇ ಭಂಗಿ ಸೇವಿಸುವ ಅಘೋರಿಗಳು ಅಲ್ಲವೇ?

ಸಾಮಾನ್ಯವಾಗಿ ಡ್ರಗ್ಸ್ ಎನ್ನುವ ಶಬ್ದ ಕೇಳಿದಾಕ್ಷಣ ನಮ್ಮ ಕಣ್ಣೆದುರಿಗೆ ಬರುವುದು ಇಂಜೆಕ್ಷನ್ ಚುಚ್ಚಿಕೊಳ್ಳುವ ದೃಶ್ಯ. ಇದಕ್ಕೆ ಕಾರಣ ಪಾಶ್ಚಿಮಾತ್ಯ ಮತ್ತು ನಮ್ಮ ದೇಶೀ ಸಿನಿಮಾಗಳು. ಈ ರೀತಿ ಚುಚ್ಚಿಕೊಳ್ಳುವ ಡ್ರಗ್ಸ್ ಗಳೆಲ್ಲ ಅವು ಬಹುತೇಕ ಹಾರ್ಡ್ ಡ್ರಗ್ಸ್‌ಗಳು. ಅವು ಸಾಮಾನ್ಯವಾಗಿ ಒಂದೆರಡು ಬಾರಿ ಸೇವಿಸಿಬಿಟ್ಟರೆ ಅದರ ಚಟ ಹತ್ತಿಬಿಡುವುದು ಸಾಮಾನ್ಯ. ಹೆರಾಯಿನ್, ಒಪಿಯಂ, ಎಲ್.ಎಸ್.ಡಿ, ಡಿ.ಎಂ.ಟಿ, ಫೆಂಟಾನಿಲ್ ಈ ಡ್ರಗ್ಸ್‌ಗಳೆಲ್ಲ ಹಾರ್ಡ್ ಡ್ರಗ್ಸ್ ಗಳು. ಇವನ್ನು ನಾನಾರೀತಿಯ ಕೆಮಿಕಲ್ ಪ್ರೊಸೆಸ್‌ನಿಂದ ತಯಾರಿಸಲಾಗುತ್ತದೆ. ಆ ಕಾರಣಕ್ಕೆ ಮತ್ತು ಅವು ಕಾನೂನು ಬಾಹಿರವಾಗಿ ಕದ್ದು ಮುಚ್ಚಿ ತಯಾರಾಗುವುದರಿಂದ ಕೆಮಿಕಲ್ ಪ್ರೊಸೆಸ್ ಅಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಅದು ಜೀವವೇ ತೆಗೆದುಬಿಡುವಷ್ಟು ಅಪಾಯಕಾರಿಯಾಗಿರುವುದರಿಂದ ಅದನ್ನು ಗಾಂಜಾದಂತೆ ನೋಡುವಂತಿಲ್ಲ. ಇಂದು ಜಗತ್ತಿನಲ್ಲಿ ಅತಿ ಹೆಚ್ಚು ಬಳಸಲ್ಪಡುವ ಹಾರ್ಡ್ ಡ್ರಗ್ಸ್ ಗಳಲ್ಲಿ ಕೊಕೈನ್ ಮತ್ತು ಹೆರಾಯಿನ್‌ನದ್ದೇ ಸಿಂಹಪಾಲು. ಈ ಎರಡೂ ಡ್ರಗ್ಸ್ ಗಳು ಜೀವವನ್ನೇ ತೆಗೆಯುವ – ಜೀವನವನ್ನೇ ಬುಡಮೇಲು ಮಾಡುವಷ್ಟು ಭಯಾನಕ. ಹೆರಾಯಿನ್ ಸೇವಿಸಿದಾಗ ದೇಹದಲ್ಲಿ ಡೋಪಮೈನ್ ಎನ್ನುವ ರಾಸಾಯನಿಕ ಉತ್ಪತ್ತಿಯಾಗುತ್ತದೆ. ಅತಿ ಹೆಚ್ಚು ದೈಹಿಕ ಶ್ರಮ – ಜಿಮ್ ಮಾಡಿದಾಗ ಕೂಡ ಇದೇ ಡೋಪಮೈನ್ ಎನ್ನುವ ರಾಸಾಯನಿಕ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಹೇಗೆ ಜಿಮ್ ಮಾಡಿದಾಗ ಒಂದು ರೀತಿಯ ಉಲ್ಲಾಸ ದೇಹದಲ್ಲುಂಟಾಗುತ್ತದೆಯೋ ಅದೇ ಉಲ್ಲಾಸದ ಹತ್ತು ಪಟ್ಟು ಈ ಹೆರಾಯಿನ್ ಕೃತಕವಾಗಿ ನಿರ್ಮಿಸುತ್ತದೆ. ಡೋಪಮೈನ್ ದೇಹದಲ್ಲಿ ಸಹಜವಾಗಿ ಉತ್ಪತ್ತಿಯಾದಾಗ ನಮ್ಮನ್ನು ಹೆಚ್ಚು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಜಿಮ್‌ಗೆ ಹೋಗಿ ಬಂದ ದಿನ ನಾವು ಅತಿ ಹೆಚ್ಚು ಲವಲವಿಕೆಯಿಂದಿರಲು ಕಾರಣ ಬಿಡುಗಡೆಯಾಗುವ ಇದೇ ಡೋಪಮೈನ್. ಆದರೆ ಕೃತಕವಾಗಿ ಪ್ರಮಾಣ ಮೀರಿ ಹೆರಾಯಿನ್ ಸೇವಿಸುವುದರ ಮೂಲಕ ಡೋಪಮೈನ್ ಉತ್ಪತ್ತಿಯಾಗುವಂತಾದರೆ ಅದು ನಶೆಯಂತೆ ಕೆಲಸ ಮಾಡುತ್ತದೆ. ಪ್ರತೀ ದಿನ ಜಿಮ್‌ಗೆ ಹೋದಲ್ಲಿ ಸುಮಾರು ಕಾಲದ ನಂತರ ಯಾವ ಕಾರಣಕ್ಕೆ ಜಿಮ್ ಗೆ ಹೋಗದಿದ್ದಲ್ಲಿ ದೇಹದಲ್ಲೇನೋ ಕಳೆದುಕೊಂಡ ಭಾವ ಹುಟ್ಟುತ್ತದೆಯೋ ಅದೇ ಭಾವ ನೂರು ಪಟ್ಟು ಹೆರಾಯಿನ್‌ನಿಂದ ಹುಟ್ಟಿಕೊಳ್ಳುತ್ತದೆ. ಆ ಕಾರಣಕ್ಕೆ ಹೆರಾಯಿನ್ ಕೆಲವೇ ಬಳಕೆಯಲ್ಲಿ ಚಟವಾಗಿಬಿಡುತ್ತದೆ.

ಎರಡನೆಯ ವ್ಯಾಪಕವಾಗಿ ಬಳಸಲ್ಪಡುವ ಹಾರ್ಡ್ ಡ್ರಗ್ಸ್ ಎಂದರೆ ಕೊಕೈನ್. ಕೊಕೈನ್ ಬೇರೆಯದೇ ರೀತಿಯಲ್ಲಿ ಕೆಲಸ ಮಾಡುತ್ತದೆ. ಕೊಕೈನ್ ಸೇವಿಸಿದಾಗ ಮೆದುಳಿನ ನರಗಳು ಉದ್ರೇಕಗೊಳ್ಳುತ್ತವೆ. ಈ ಉದ್ರೇಕ ಗೆಲುವಿನ ಉದ್ರೇಕಕ್ಕೆ ಹೋಲಿಕೆಯಾಗುವಂಥದ್ದು. ಹೇಗೆ ನಾವು ಪ್ರಶಸ್ತಿಯನ್ನು ಪಡೆದಾಗ ಅಥವಾ ಏನೋ ಒಂದು ಗೆದ್ದಾಗ ಖುಷಿ ಪಡುತ್ತೇವೆಯೋ ಅದೇ ಸ್ಥಿತಿ ಮೆದುಳಿನಲ್ಲಿ ಉಂಟಾಗುತ್ತದೆ. ಈ ಸ್ಥಿತಿ ಮಾನಸಿಕವಾಗಿ ತೀರಾ ದುರ್ಬಲವಾದವನಿಗೆ ಅಸಾಮಾನ್ಯ ಗೆಲುವಿನ ಅನುಭವ ಕೊಡುತ್ತದೆ. ತಾಕತ್ತು ಇಮ್ಮಡಿಸಿದ ಭಾವ ಹುಟ್ಟುತ್ತದೆ. ಗೆಲ್ಲುವ ಖುಷಿಯೇ ಇನ್ನಷ್ಟು ಸಾಧಿಸಲು ಪ್ರೇರೇಪಿಸುತ್ತದೆಯೋ ಥೇಟ್ ಅಂಥದ್ದೇ ಸ್ಥಿತಿ ಮೆದುಳಿನಲ್ಲಿ ಉಂಟಾಗಿರುತ್ತದೆ. ಪ್ರತೀ ಬಾರಿ ಇನ್ನೊಮ್ಮೆ ಕೊಕೈನ್ ಸೇವಿಸುವಾಗ ಹಿಂದಿನ ಸಲಕ್ಕಿಂತ ಜಾಸ್ತಿ ಸೇವಿಸಿದರೆ ಮಾತ್ರ ಹಿಂದಿನ ಸಲದಷ್ಟು ಮತ್ತು ಬರಲು ಸಾಧ್ಯ. ಈ ಕಾರಣದಿಂದ ಪ್ರತೀ ಬಾರಿ ವ್ಯಕ್ತಿ ಹೆಚ್ಚು ಹೆಚ್ಚು ಕೊಕೈನ್ ಸೇವಿಸುತ್ತಾ ಹೋಗುತ್ತಾನೆ. ಒಂದು ಹಂತದ ನಂತರ ಸೇವಿಸುವ ಕೊಕೈನ್ ಪ್ರಮಾಣ ರಕ್ತದೊತ್ತಡವನ್ನು ಅದ್ಯಾವ ಪ್ರಮಾಣಕ್ಕೆ ಒಯ್ದು ನಿಲ್ಲಿಸುತ್ತದೆಯೆಂದರೆ ಆತನ ರಕ್ತನಾಳಗಳು ಮತ್ತು ಹೃದಯ ಅಷ್ಟು ಒತ್ತಡವನ್ನು ಸಾಹಸಲಾಗದೆ ಸಾವು ಸಂಭವಿಸುತ್ತದೆ. ಒಂದು ವೇಳೆ ಒಂದೆರಡು ಬಾರಿ ಕೊಕೈನ್ ಸೇವಿಸಿದ ವ್ಯಕ್ತಿ ಸೇವಿಸುವುದನ್ನು ನಿಲ್ಲಿಸಿದರೆ ಮಹಾನ್ ಸೋಲಿನ, ಮಾನಸಿಕ ಅಧಃಪತನದ ಅನುಭವವಾಗುತ್ತದೆ. ಹಾಗಾಗಿ ಇನ್ನೊಮ್ಮೆ ಸೇವಿಸುವಂತೆ ಪ್ರೇರೇಪಿಸುತ್ತದೆ. ಈ ಎರಡೂ ಹಾರ್ಡ್ ಡ್ರಗ್ಸ್‌ನ ಸೇವನೆ ಮತ್ತು ಅದು ಉಂಟುಮಾಡುವ ದೈಹಿಕ ಮತ್ತು ಮಾನಸಿಕ ಸ್ಥಿತಿ ಮನುಷ್ಯನ ತೀರಾ ಅಗತ್ಯವಿರುವ ಭಾವನೆಯನ್ನು ಹಲವು ಪಟ್ಟು ಹೆಚ್ಚು ಮಾಡುವ ಮೂಲಕ ನಶೆ ಕೊಡುವುದರಿಂದ ಇದು ಅತಿ ಬೇಗ – ಕೆಲವೇ ಬಾರಿ ತೆಗೆದುಕೊಂಡ ಕೂಡಲೇ ಚಟವಾಗಿಬಿಡುವಂಥದ್ದು. ದಕ್ಷಿಣ ಅಮೆರಿಕದ ಕೊಲಂಬಿಯಾ, ಪೆರು ಮತ್ತು ಬೊಲಿವಿಯಾ ಜಗತ್ತಿಗೆ ಕೊಕೈನ್ ಅನ್ನು ಸರಬರಾಜು ಮಾಡುವ ದೇಶಗಳು. ಈ ದೇಶಗಳಲ್ಲೆಲ್ಲ ಈ ಕಾರ್ಟೆಲ್ – ಮಾಫಿಯಾ ಎಷ್ಟು ಗಟ್ಟಿ ಎಂದರೆ ಅಲ್ಲಿನ ಸರಕಾರಗಳು, ಸರಕಾರೀ ಪೊಲೀಸ್ ವ್ಯವಸ್ಥೆ ಕೂಡ ಈ ಡ್ರಗ್ಸ್ ತಯಾರಾಗುವ ನಮ್ಮ ರಾಜ್ಯಗಳಷ್ಟು ದೊಡ್ಡ ಜಾಗದಲ್ಲಿ ಕೈ ಕಟ್ಟಿ ನಿಲ್ಲುತ್ತವೆ. ಮೆಕ್ಸಿಕೋ, ಬೊಲಿವಿಯಾ, ಅಫ್ಘಾನಿಸ್ತಾನ್, ಪೆರು, ಕೊಲಂಬಿಯಾ ಈ ದೇಶಗಳು ಮತ್ತು ಅಲ್ಲಿನ ಸಿಸ್ಟಮ್ ಅದೆಷ್ಟು ವ್ಯವಸ್ಥಿತವಾಗಿ ಇದರ ಸುತ್ತ ಇಂದು ಬೆಳೆದು ನಿಂತಿದೆಯೆಂದರೆ ಆ ದೇಶಗಳು ಈ ಹಾರ್ಡ್ ಡ್ರಗ್ ಅನ್ನು ವ್ಯವಸ್ಥಿತವಾಗಿ ಹೊರ ದೇಶಗಳಿಗೆ ವಿಮಾನ, ಸಬ್ಮೆರಿನ್, ಹಡಗಿನಲ್ಲಿ ಸರಬರಾಜು ಮಾಡುತ್ತವೆ.

ಎಲ್ಲ ಡ್ರಗ್ ಒಂದೇ ರೀತಿ ಪರಿಗಣಿಸಿ ವ್ಯವಸ್ಥೆಯಿಂದ ಕಿತ್ತೊಗೆಯಬೇಕು ಎನ್ನುವುದು ಮೂರ್ಖತನವಾಗುತ್ತದೆ. ಸಾಫ್ಟ್ ಡ್ರಗ್ಸ್‌ಗಳಾದ ಗಾಂಜಾವನ್ನು ದೇಶದಲ್ಲೇ ಬೆಳೆಯುವುದರಿಂದ ಅದನ್ನು ರಾಜ್ಯ ಸರಕಾರಗಳು ಕೂಡ ನಿಯಂತ್ರಿಸಬಹುದು. ಇಂದು ಭಾರತದಲ್ಲಿ ಬಳಕೆಯಾಗುವ ಶೇ.92ರಷ್ಟು ಡ್ರಗ್ಸ್ ಈ ಸಾಫ್ಟ್ ಡ್ರಗ್ಸ್ ಎನ್ನಲಾಗುವ ಗಾಂಜಾ. ಉಳಿದ ಶೇ.8ರಷ್ಟು ಮಾತ್ರ ಅತಿ ಮಾರಕ ಹಾರ್ಡ್ ಡ್ರಗ್ಸ್ ಗಳು. ಶೇ.8 ಸಣ್ಣ ಸಂಖ್ಯೆಯಂತೆ ಕಂಡರೂ ಅದು ಭಾರತದಂತಹ ದೇಶದಲ್ಲಿ ಸಣ್ಣ ಪ್ರಮಾಣವಲ್ಲ. ಇದು ವಿದೇಶಗಳಿಂದ ಹೆಚ್ಚಾಗಿ ತಯಾರಾಗಿ ಬರುವ ಕಾರಣದಿಂದ ಇದರ ನಿಯಂತ್ರಿಸುವ ಕೆಲಸದಲ್ಲಿ ಕೇಂದ್ರ ಸರಕಾರ ಮುತುವರ್ಜಿ ವಹಿಸಬೇಕಾಗುತ್ತದೆ. ಜಲ ಮತ್ತು ವಾಯುಸಾರಿಗೆಯ ಮೂಲಕವೇ ಒಳ ಹೊಕ್ಕುವ ಈ ಡ್ರಗ್ಸ್ ಗಳನ್ನು ಬಂದರು ಮತ್ತು ವಿಮಾನ ನಿಲ್ದಾಣ ನಿಯಂತ್ರಿಸುವ ಕೇಂದ್ರವೇ ಕಂಟ್ರೋಲ್ ಮಾಡಬೇಕು. ಅಲ್ಲದೆ ಅಷ್ಟೇ ಪ್ರಮಾಣದಲ್ಲಿ ಪಕ್ಕದ ದೇಶಗಳ ಗಡಿಯಿಂದ ಕೂಡ ಈ ಹಾರ್ಡ್ ಡ್ರಗ್ಸ್ ದೇಶದೊಳಕ್ಕೆ ಬರುವುದರಿಂದ, ಗಡಿ ನಿಯಂತ್ರಿಸುವ ಕೇಂದ್ರ ಸರಕಾರವೇ ಈ ನಿಯಂತ್ರಣದ ಹೊಣೆ ಹೊರಬೇಕಾಗುತ್ತದೆ. ಈ ಜಾಗತಿಕ ಹಾರ್ಡ್ ಡ್ರಗ್ಸ್ ದಂಧೆ ಇಂದು ಸುಮಾರು ಐದುನೂರು ಬಿಲಿಯನ್ ಡಾಲರ್‌ನಷ್ಟು ದೊಡ್ಡ ವ್ಯವಹಾರ. ಇದು ಭಯೋತ್ಪಾದಕರಿಗೆ, ಅಂಡರವರ್ಲ್ಡ್‌ಗೆ ಹಣ ಸರಬರಾಜಾಗುವ ಜಾಲವಾದದ್ದರಿಂದ ಮತ್ತು ಕೆಲವು ದೇಶಗಳೇ ಇದರಲ್ಲಿ ಭಾಗಿಯಾಗಿರುವುದರಿಂದ ಇದನ್ನು ತಡೆಹಿಡಿಯಲು ಬೇರೆಯದೇ ಆದ ರೀತಿ ಕಾವಲಿನ, ಕಾನೂನಿನ, ವ್ಯವಸ್ಥೆಯ ಅವಶ್ಯಕತೆಯಿದೆ. ಒಮ್ಮೆ ಹಾರ್ಡ್ ಡ್ರಗ್ಸ್ ದುರವಸ್ಥೆ ದೇಶದಲ್ಲಿ ಬೆಳೆಯಿತೆಂದರೆ ಅದನ್ನು ಅಷ್ಟು ಸುಲಭದಲ್ಲಿ ನಿಯಂತ್ರಿಸಲು ಸಾಧ್ಯವಿಲ್ಲ. ಇದಕ್ಕೆ ಅಮೆರಿಕವೇ ಅಗ್ರ ಉದಾಹರಣೆ. ಇಂದು ಅಮೆರಿಕ ಸುಮಾರು ಐದು ಬಿಲಿಯನ್ ಡಾಲರ್ ಅನ್ನು ಈ ಹಾರ್ಡ್ ಡ್ರಗ್ಸ್ ನಿಯಂತ್ರಣಕ್ಕೆ ಪ್ರತೀ ವರ್ಷ ಮೀಸಲಿಡುತ್ತದೆ. ಇನ್ನು ಹಾರ್ಡ್ ಡ್ರಗ್ಸ್ ಚಟಕ್ಕೆ ಬಲಿಯಾದವರ ರಿಹ್ಯಾಬಿಲಿಟೇಷನ್‌ಗೆ, ಶುಶ್ರೂಷೆಗೆ ಹಲವು ಬಿಲಿಯನ್ ಹಣವನ್ನು ವಾರ್ಷಿಕವಾಗಿ ತೆಗೆದಿಡುವ ಸ್ಥಿತಿ ಅಮೆರಿಕದಲ್ಲಿ ನಿರ್ಮಾಣವಾಗಿದೆ. ಇದರಿಂದ ನಾವು ಕಲಿಯಬೇಕಾದ ಪಾಠ ಸಾಕಷ್ಟಿದೆ.

ಸಮಾಜಕ್ಕೆ ಡ್ರಗ್ಸ್ ಎನ್ನುವುದು ಒಂಥರಾ ಕ್ಯಾನ್ಸರ್ ಇದ್ದಂತೆ. ಆರಂಭದಲ್ಲಿಯೇ ಗುರುತಿಸಿ ಕತ್ತರಿಸಿ ಹಾಕಿದರೆ ಸಮಾಜ ಸುರಕ್ಷಿತ. ಅದನ್ನ ಬಿಟ್ಟು ಸಮಸ್ಯೆ ದೊಡ್ಡದಾದಾಗಲೇ ಅದನ್ನು ಮುಗಿಸುತ್ತೇವೆ ಎಂದರೆ ಅದು ಸಾಧ್ಯವಿಲ್ಲ. ಇಂದು ಭಾರತದಲ್ಲಿ ಡ್ರಗ್ಸ್ ಈ ಪ್ರಮಾಣದಲ್ಲಿ ಸುದ್ದಿ ಮಾಡುತ್ತಿರುವುದು ಒಂದು ರೀತಿ ಒಳ್ಳೆಯದೇ. ಆದರೆ ಇದು ನಮ್ಮ ಕಾನೂನು ವ್ಯವಸ್ಥೆಯ ಷೋ ಆಫ್‌ಗಷ್ಟೇ ಸೀಮಿತವಾದರೆ ಪ್ರಯೋಜನವಿಲ್ಲ. ಈ ಡ್ರಗ್ಸ್ ಮಾಫಿಯಾದ ಕೊನೆಯ ಕೊಂಡಿ ಎಂದರೆ ಗ್ರಾಹಕ. ಹಾಗಾಗಿ ಗ್ರಾಹಕರಾದ ಸಿನಿಮಾ ತಾರೆಯರನ್ನು ಶಿಕ್ಷಿಸುವುದು ಪರಿಹಾರವಲ್ಲ.

ಸಿನಿಮಾ ತಾರೆಯರು ಜೈಲಿಗೆ ಹೋದರೆ ಡ್ರಗ್ಸ್ ಬಳಸದಂತೆ ಸಮಾಜದಲ್ಲಿ ಸ್ವಲ್ಪ ಜಾಗ್ರತೆ ಮೂಡಬಹುದೇ ವಿನಃ ಅಸಲಿ ಸಮಸ್ಯೆ ಹಾಗೆಯೇ ಉಳಿದುಬಿಡುತ್ತದೆ. ಸಮಸ್ಯೆಯ ಮೂಲವಾದ ಸರಬರಾಜು ವ್ಯವಸ್ಥೆ ನಾಶವಾಗಬೇಕು ಮತ್ತು ದೇಶದೊಳಗೆ ಕಾನೂನು ಬಾಹಿರವಾಗಿ ಬರುವ ಮಾರ್ಗಗಳು ಬಂದ್ ಆಗಬೇಕು. ಇಲ್ಲದಿದ್ದರೆ ಇನ್ನೊಂದು ರೂಪದಲ್ಲಿ ಈ ಸಮಸ್ಯೆ ಮುಂದೊಂದು ದಿನ ನಮ್ಮೆದುರು ಬಂದು ನಿಲ್ಲುತ್ತದೆ. ಕೇವಲ ಸ್ಯಾಂಡಲ್‌ವುಡ್, ಬಾಲಿವುಡ್ ಅಷ್ಟೇ ಕ್ಲೀನ್ ಆದರೆ ಸಾಕೇ? ಈ ವುಡ್‌ಗಳು ಸಮಾಜವನ್ನು ಮನರಂಜಿಸುವ ಒಂದು ಅಂಗವೇ ಹೊರತು ಇದೇ ಪೂರ್ಣ ಸಮಾಜವಲ್ಲವಲ್ಲ. ಈ ಡ್ರಗ್ಸ್‌ನ ಮೂಲೋಚ್ಚಾಟನೆಯ ಕೆಲಸವಾಗದಿದ್ದಲ್ಲಿ ನಾವು ಕೂಡ ಅಮೆರಿಕದಂತೆ ಮುಂದೊಂದು ದಿನ ತಲೆ ಮೇಲೆ ಕೈ ಹೊತ್ತು ಲಕ್ಷ ಕೋಟಿ ಗಟ್ಟಲೆ ಖರ್ಚು ಮಾಡಿದರೂ ಒಮ್ಮೆ ಸಮಾಜದಲ್ಲಿ ಬಲಿಷ್ಠವಾಗಿ ಬೆಳೆದು ನಿಂತ ವ್ಯವಸ್ಥೆಯಾದ ಮೇಲೆ ಇದನ್ನು ಹೊಡೆದೋಡಿಸಲು ಸಾಧ್ಯವಿಲ್ಲ.

ಹಲವರಿಗೆ ಮಾದರಿಯಾಗುವ ಸಿನಿಮಾ ತಾರೆಯರನ್ನು ಪ್ರಶ್ನಿಸುವುದು, ಶಿಕ್ಷೆಗೊಳಪಡಿಸುವುದು ಸರಿಯೇ. ಆದರೆ ಮೂಲ ಸಮಸ್ಯೆಯನ್ನು ಮರೆಮಾಚುವ ಕೆಲಸವಾಗಬಾರದೆನ್ನುವುದೇ ಇಲ್ಲಿನ ಕಳಕಳಿ. ಸಿನಿಮಾ ತಾರೆಯರ ಮತ್ತಿನ ಸುದ್ದಿ ಕೇವಲ ಗಮ್ಮತ್ತಿಗಷ್ಟೇ ಸೀಮಿತವಾಗದಿರಲಿ. ಅದರಾಚೆ ಈ ದುರ್ವ್ಯವಸ್ಥೆಯ ಬೇರನ್ನು ಕೀಳುವ ಕೆಲಸವಾಗಲಿ. ಮುಂದೆ ಬಂದೊದಗಬಹುದಾದ ಸಾಮಾಜಿಕ ಸಮಸ್ಯೆಯೊಂದರ ಹೊಸ್ತಿಲನ್ನು ಈಗಾಗಲೇ ದಾಟಿಯಾದ ಸತ್ಯದ ಅನುಭವ ಈ ಘಟನೆಯಿಂದ ನಮ್ಮನ್ನಾಳುವವರದ್ದಾಗಲಿ.

# ಬೌಲರೇ ಇಲ್ಲದ ಭಾರತದ ಪಾರ್ಲಿಮೆಂಟ್!




ಸಂಗತ

ಡಾ.ವಿಜಯ್ ದರಡಾ

vveditoped@gmail.com


ಭಾರತದ ನೂತನ ಸಂಸತ್ ಭವನದಲ್ಲಿ ನಡೆದ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕಳೆದ ವಾರ ಆರು ಅತ್ಯಂತ ಪ್ರಮುಖ ಮಸೂದೆಗಳು ಅಂಗೀಕಾರಗೊಂಡವು. ವಿಶೇಷ ಏನೆಂದರೆ, ವಿರೋಧ ಪಕ್ಷಗಳ ಬಹುತೇಕ ಸಂಸದರನ್ನು ಆ ಸಮಯದಲ್ಲಿ ಸಂಸತ್ತಿನಿಂದ ಅಮಾನತು ಮಾಡಲಾಗಿತ್ತು. ಅವರ ಅನುಪಸ್ಥಿತಿಯಲ್ಲಿ ಬಿಲ್‌ಗಳು ಪಾಸಾದವು. ವಿರೋಧ ಪಕ್ಷಗಳ ಸಂಸದರು ಮಾಡಿದ ಗದ್ದಲಕ್ಕೂ, ಅವರನ್ನು ಅಮಾನತುಗೊಳಿಸಿದ ಕ್ರಮಕ್ಕೂ ವಿರೋಧ ಪಕ್ಷಗಳು ಹಾಗೂ ಆಡಳಿತ ಪಕ್ಷದ ವಲಯದಲ್ಲಿ ಅವರದೇ ಆದ ಸಮರ್ಥನೆಗಳಿದ್ದವು. ಸರ್ಕಾರ ಏಕಪಕ್ಷೀಯವಾಗಿ, ಸರ್ವಾಧಿಕಾರಿ ಧೋರಣೆಯಿಂದ ನಡೆದುಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದವು. ಅದಕ್ಕೆ ಪ್ರತಿಯಾಗಿ, ವಿಪಕ್ಷಗಳು ಅರಾಜಕ ಧೋರಣೆಯನ್ನು ಪ್ರದರ್ಶಿಸುತ್ತಿವೆ ಎಂದು ಆಡಳಿತ ಪಕ್ಷ ಆರೋಪಿಸಿತು. ಒಂದೇ ಅಧಿವೇಶನದಲ್ಲಿ 146 ಸಂಸದರನ್ನು ಅಮಾನತುಗೊಳಿಸಿರುವುದು ಭಾರತದ ಸಂಸದೀಯ ಇತಿಹಾಸದಲ್ಲೇ ಮೊದಲು. ಅವರಲ್ಲಿ 100 ಸಂಸದರು ಲೋಕಸಭೆಯ ಸದಸ್ಯರಾಗಿದ್ದರೆ, ಇನ್ನುಳಿದ 46 ಮಂದಿ ರಾಜ್ಯಸಭಾ ಸದಸ್ಯರು. ಈ ಹಿಂದೆ 1989ರಲ್ಲಿ ಲೋಕಸಭೆಯಿಂದ 63 ಸಂಸದರನ್ನು ಅಮಾನತು ಮಾಡಲಾಗಿತ್ತು. ಅವರು ಇಂದಿರಾ ಗಾಂಧಿ ಹತ್ಯೆ ತನಿಖೆಯ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಬೇಕು ಎಂದು ಆಗ್ರಹಿಸಿ ಅಮಾನತುಗೊಂಡಿದ್ದರು.

ಈ ಬಾರಿಯ ವಿಚಾರ ಬೇರೆ. ಸಂಸತ್ ಭವನದೊಳಗೆ ಕೆಲ ದುಷ್ಕರ್ಮಿಗಳು ನುಸುಳಿ, ಸ್ಮೋಕ್ ಕ್ಯಾನಿಸ್ಟರ್‌ಗಳನ್ನು ಸಿಡಿಸುವ ಮೂಲಕ ಉಂಟುಮಾಡಿದ ಗಂಭೀರವಾದ ಭದ್ರತಾ ಲೋಪದ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಸದನದಲ್ಲಿ ಹೇಳಿಕೆ ನೀಡಬೇಕು ಎಂದು ಆಗ್ರಹಿಸಿ ವಿಪಕ್ಷಗಳ ಸಂಸದರು ಧರಣಿ ನಡೆಸಿದ್ದರು. ಆದರೆ ಆಡಳಿತ ಪಕ್ಷವು ಅದಕ್ಕೆ ಒಪ್ಪಲಿಲ್ಲ. ಘಟನೆಯ ಬಗ್ಗೆ ತನಿಖೆ ನಡೆಯುತ್ತಿರುವುದರಿಂದ ಅದರ ನಡುವೆ ಪ್ರಧಾನಿ ಅಥವಾ ಗೃಹ ಸಚಿವರು ಹೇಳಿಕೆ ನೀಡುವ ಅಗತ್ಯವಾದರೂ ಏನು ಎಂಬುದು ಆಡಳಿತ ಪಕ್ಷದ ವಾದವಾಗಿತ್ತು. ಅದರಿಂದಾಗಿ ಉಭಯ ಪಕ್ಷಗಳ ನಡುವೆ ತೀವ್ರ ಸಂಘರ್ಷ ಏರ್ಪಟ್ಟು, ಸಂಸತ್ತಿನಲ್ಲಿ ಕೋಲಾಹಲ ಉಂಟಾಯಿತು. ಸದನವನ್ನು ಸರಿದಾರಿಗೆ ತರಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಉಭಯ ಸದನಗಳ ಮುಖ್ಯಸ್ಥರು ದೊಡ್ಡ ಸಂಖ್ಯೆಯಲ್ಲಿ ವಿಪಕ್ಷಗಳ ಸಂಸದರನ್ನು ಅಮಾನತುಗೊಳಿಸಿದರು. ಬೇರೆ ಬೇರೆ ಹಂತದಲ್ಲಿ, ಮೂರು ದಿನಗಳಲ್ಲಿ, ಗುಂಪುಗುಂಪಾಗಿ ಸಂಸದರನ್ನು ಚಳಿಗಾಲದ ಅಧಿವೇಶನದ ಇನ್ನುಳಿದ ಅವಧಿಗೆ ಅಮಾನತುಗೊಳಿಸಲಾಯಿತು. ಅದನ್ನು ನೋಡಿ ಯಾರೋ ಹೇಳಿದ್ದು ಮಾರ್ಮಿಕವಾಗಿತ್ತು– 'ಬೌಲರ್ ಹಾಗೂ ಫೀಲ್ಡರ್‌ಗಳೇ ಇಲ್ಲದೆ ಸೆಂಚುರಿ ಬಾರಿಸಲು ಹೊರಟ ಬ್ಯಾಟರ್' ರೀತಿಯಲ್ಲಿ ಸರ್ಕಾರ ವರ್ತಿಸುತ್ತಿದೆ.

ನಾನು 18 ವರ್ಷಗಳ ಕಾಲ ಸಂಸತ್ತಿನ ಸದಸ್ಯನಾಗಿದ್ದೆ. ಆ ಅವಧಿಯಲ್ಲಿ ಸಾಕಷ್ಟು ವಿಷಯಗಳ ಬಗ್ಗೆ ಬಹಳ ತೀಕ್ಷ್ಣವಾದ ವಾಗ್ಯುದ್ಧಗಳು ನಡೆದಿರುವುದನ್ನು ನೋಡಿದ್ದೇನೆ. ಸದನದಲ್ಲಿ ತಾರಕಕ್ಕೇರಿದ ಜಗಳಗಳು, ಕೋಲಾಹಲಕರ ಸನ್ನಿವೇಶಗಳು ಏರ್ಪಟ್ಟಿದ್ದಕ್ಕೆ ಸಾಕ್ಷಿಯಾಗಿದ್ದೇನೆ. ಆದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸದಸ್ಯರನ್ನು ಅಮಾನತುಗೊಳಿಸಿದ್ದನ್ನು ಯಾವತ್ತೂ ನೋಡಿಲ್ಲ. ಇದು ನಿಜಕ್ಕೂ ಅಚ್ಚರಿಯ ಸಂಗತಿ. ವಿಪಕ್ಷಗಳೇ ಇಲ್ಲದ ಸಂಸತ್ತನ್ನು ಊಹಿಸಿಕೊಳ್ಳಲು ಸಾಧ್ಯವೇ? ಖಂಡಿತ ಇಲ್ಲ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳಿಗೆ ಬಹಳ ಮುಖ್ಯವಾದ ಸ್ಥಾನವಿದೆ. ದೇಶದ ಮೊದಲ ಪ್ರಧಾನಿ ಪಂ.ಜವಾಹರಲಾಲ್ ನೆಹರು ಅವರು ಅದ್ಭುತ ಬಹುಮತದೊಂದಿಗೆ, ಬಹಳ ಅಧಿಕಾರಯುತವಾಗಿ ದೇಶವನ್ನು ಆಳುತ್ತಿದ್ದರು. ಆಗಲೂ ವಿರೋಧ ಪಕ್ಷ ಬಹಳ ದುರ್ಬಲವಾಗಿತ್ತು. ಆದರೂ ಅವರು ವಿರೋಧ ಪಕ್ಷಕ್ಕೆ ಬಹಳ ಮಹತ್ವ ನೀಡುತ್ತಿದ್ದರು. ಎಷ್ಟೆಂದರೆ, ತಮ್ಮ ಕಟು ಟೀಕಾಕಾರರಾದ ರಾಮ ಮನೋಹರ ಲೋಹಿಯಾ, ಅಟಲ್ ಬಿಹಾರಿ ವಾಜಪೇಯಿಯಂತಹ ಸದಸ್ಯರು ಎಲ್ಲಾ ಸಮಯದಲ್ಲೂ ಸದನದಲ್ಲಿ ಇರಬೇಕೆಂದು ಅವರು ಬಯಸುತ್ತಿದ್ದರು.

ಇವತ್ತು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಈ ಹಿಂದೆ ಬಹಳ ಸುದೀರ್ಘ ಕಾಲ ವಿರೋಧ ಪಕ್ಷವಾಗಿತ್ತು. ಜನರ ಆಶೋತ್ತರಗಳಿಗೆ ಧ್ವನಿಯಾಗಲು ಬಿಜೆಪಿ ಕೂಡ ಸಾಕಷ್ಟು ಸಲ ತುಂಬಾ ಕಠಿಣ ನಿಲುವುಗಳನ್ನು ತೆಗೆದುಕೊಂಡಿದೆ. ಆಡಳಿತ ಪಕ್ಷದ ಸದಸ್ಯರು ಹಾಗೂ ಸರ್ಕಾರದ ಮೇಲೆ ಹಗರಣಗಳ ಆರೋಪ ಬಂದಾಗ ಸಂಸತ್ತಿನಲ್ಲಿ ಬಿಜೆಪಿ ಸದಸ್ಯರು ಕೋಲಾಹಲ ಸೃಷ್ಟಿಸಿದ್ದಾರೆ. ಕಾಮನ್‌ವೆಲ್ತ್ ಗೇಮ್ಸ್ ಹಗರಣ, 2ಜಿ ಹಗರಣ, ಕಲ್ಲಿದ್ದಲು ಹಗರಣ, ಮುಂಬೈನ ಆದರ್ಶ ಸೊಸೈಟಿ ಹಗರಣಗಳು ಬೆಳಕಿಗೆ ಬಂದಾಗ ಸಂಸತ್ತಿನ ಉಭಯ ಸದನಗಳಲ್ಲಿ ಬಿಜೆಪಿ ಸದಸ್ಯರು ತೀವ್ರ ಪ್ರತಿಭಟನೆ ನಡೆಸಿದ್ದರು. ಇಂತಹ ರಾಷ್ಟ್ರೀಯ ಪ್ರಾಮುಖ್ಯತೆಯ ವಿಷಯವಲ್ಲದೆ, ಕೆಲ ಸ್ಥಳೀಯ ಅಥವಾ ಕಡಿಮೆ ಪ್ರಾಮುಖ್ಯತೆಯ ವಿಚಾರಗಳಿಗೆ ಸಂಬಂಧಿಸಿದಂತೆಯೂ ಬಿಜೆಪಿ ಬಹಳ ಕಠಿಣ ನಿಲುವು ತಾಳಿದ್ದಿದೆ. ಇಂದು ದೇಶದಲ್ಲಿ ಡಿಜಿಟಲ್ ಪಾವತಿ ಹಾಗೂ ಭದ್ರತೆ ವಿಷಯದಲ್ಲಿ ಕ್ರಾಂತಿಯನ್ನೇ ಮಾಡಿರುವ ಆಧಾರ್‌ಗೆ ಈ ಹಿಂದೆ ಬಿಜೆಪಿ ತೀವ್ರ ವಿರೋಧ ಪ್ರದರ್ಶಿಸಿತ್ತು. ಇನ್ನೂ ಅನೇಕ ಸಣ್ಣಪುಟ್ಟ ವಿಷಯಗಳನ್ನು ಹಾಗೂ ಸ್ಥಾಯಿ ಸಮಿತಿಯ ಸಭೆಯಲ್ಲಿ ಬಗೆಹರಿಸಿಕೊಳ್ಳಬಹುದಾದ ವಿಚಾರಗಳನ್ನು ಬಿಜೆಪಿ ಬಹಳ ದೊಡ್ಡದು ಮಾಡಿ ಸಂಸತ್ತಿನಲ್ಲಿ ಬಿಸಿ ಬಿಸಿ ಚರ್ಚೆ ನಡೆಸಿದ್ದಿದೆ. ಅಣ್ಣಾ ಹಜಾರೆಯವರ ಲೋಕಪಾಲ ಚಳವಳಿ ಉಪವಾಸ ಸತ್ಯಾಗ್ರಹದ ಬಗ್ಗೆ ಸಂಸತ್ತಿನಲ್ಲಿ ರಾತ್ರಿಯಿಡೀ ಚರ್ಚೆ ನಡೆದಿತ್ತು. 26/11 ಮುಂಬೈ ದಾಳಿಯ ಬಳಿಕ ನಡೆದ ತುರ್ತು ಸಭೆಗೆ ಅಂದಿನ ಕೇಂದ್ರ ಗೃಹ ಸಚಿವ ಶಿವರಾಜ ಪಾಟೀಲ್ ತಡವಾಗಿ ಬಂದಾಗ, ಅವರು ಸೂಟ್ ಬದಲಿಸುವುದರಲ್ಲಿ ಬ್ಯುಸಿಯಾಗಿದ್ದರು ಎಂಬ ಆರೋಪ ಕೇಳಿಬಂದಿತ್ತು. ಆ ವಿಚಾರ ಸದನದಲ್ಲಿ ದೊಡ್ಡ ಕೋಲಾಹಲಕ್ಕೆ ಕಾರಣವಾಗಿತ್ತು! ವಿರೋಧ ಪಕ್ಷಗಳ ಸಂಸದರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ ಅನೇಕ ಸಂದರ್ಭಗಳು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿವೆ. ಆದರೆ ಯಾವತ್ತೂ, ಯಾವ ಕಾರಣಕ್ಕೂ, ಇಷ್ಟೊಂದು ದೊಡ್ಡ ಸಂಖ್ಯೆಯ ಸಂಸದರನ್ನು ಸದನದಿಂದ ಅಮಾನತು ಮಾಡಿದ್ದನ್ನು ನಾನು ನೋಡಿಲ್ಲ!

ವಿರೋಧ ಪಕ್ಷಗಳು ಇರುವುದೇ ಜನರ ಧ್ವನಿಯನ್ನು ಸಂಸತ್ತಿನಲ್ಲಿ ಎತ್ತುವುದಕ್ಕಾಗಿ. ಪ್ರಜಾಪ್ರಭುತ್ವದ ದೇಗುಲ ಸಂಸತ್ತು. ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ವಿಪಕ್ಷಗಳ ಸಂಸದರಿಗೆ ಅನ್ನಿಸಿದರೆ ಅವರು ಪ್ರತಿಭಟನೆ ನಡೆಸಲೇಬೇಕು! ಎಲ್ಲಾ ದೇಶಗಳಲ್ಲೂ ಹೀಗೇ ಇದೆ. ಎಲ್ಲಾ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ವಿರೋಧ ಪಕ್ಷಗಳು ಸದಾ 'ದಾಳಿಗೆ ಸನ್ನದ್ಧರಾಗಿಯೇ ಇರುತ್ತವೆ. ಬ್ರಿಟನ್, ಅಮೆರಿಕ, ಫ್ರಾನ್ಸ್‌ನಂತಹ ದೇಶದಲ್ಲಿ ವಿಪಕ್ಷಗಳು ನಮ್ಮ ದೇಶಕ್ಕಿಂತ ಹೆಚ್ಚು ಉಗ್ರವಾಗಿ ನಡೆದುಕೊಳ್ಳುತ್ತವೆ. ಹಾಗಂತ ವಿರೋಧ ಪಕ್ಷಗಳು ಯಾವಾಗಲೂ ಸಂಸತ್ತಿನಲ್ಲಿ ಕೋಲಾಹಲ ಎಬ್ಬಿಸುತ್ತಿರಬೇಕೆಂದು ನಾನು ಹೇಳುತ್ತಿಲ್ಲ. ವಿಪಕ್ಷಗಳು ಕೂಡ ತಮ್ಮ ಜವಾಬ್ದಾರಿ ಏನೆಂಬುದನ್ನು ಅರ್ಥ ಮಾಡಿಕೊಂಡಿರಬೇಕು. ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡನ್ನೂ ಒಂದೇ ದೃಷ್ಟಿಯಿಂದ ನೋಡಬೇಕಾಗುತ್ತದೆ. ಏಕೆಂದರೆ ಎರಡೂ ಪಕ್ಷಗಳು ಜನಸಾಮಾನ್ಯರ ಒಳಿತಿಗಾಗಿಯೇ ಕೆಲಸ ಮಾಡುತ್ತವೆ. ನಾಲ್ಕು ಚಕ್ರಗಳು ಸರಿಯಾಗಿ ಕೆಲಸ ಮಾಡದೆ ಇದ್ದರೆ ಪ್ರಜಾಪ್ರಭುತ್ವದ ಗಾಡಿ ಮುಂದೆ ಹೋಗುವುದಾದರೂ ಹೇಗೆ? ನೆನಪಿಡಿ, ದೇಶ ಹೆಚ್ಚೆಚ್ಚು ಅಭಿವೃದ್ಧಿ ಹೊಂದಿದಷ್ಟೂ ಶತ್ರುಗಳ ದಾಳಿ ಕೂಡ ಹೆಚ್ಚುತ್ತದೆ! ಅವರ ವಿರುದ್ಧ ನಾವು ಒಗ್ಗಟ್ಟಿನಿಂದ ಹೋರಾಡಬೇಕು.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಜವಾಬ್ದಾರಿಗಳು ಹಾಗೂ ಪಾತ್ರಗಳು ಜನರ ಭಾವನೆಗಳಿಗೆ ತಕ್ಕಂತೆ ಬದಲಾಗುತ್ತಲೇ ಇರುತ್ತವೆ. ಹಿಂದೊಂದು ಕಾಲವಿತ್ತು. ಆಗ ಜನರು ಪಂ.ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಅವರನ್ನು ತುಂಬಾ ನಂಬುತ್ತಿದ್ದರು. ಅವರು ಏನು ಹೇಳಿದರೂ ಪಾಲಿಸುತ್ತಿದ್ದರು. ಇಂದು ಜನರು ಅದೇ ರೀತಿಯ ನಂಬಿಕೆಯನ್ನು ಪ್ರಧಾನಿ ನರೇಂದ್ರ ಮೋದಿಯವರಲ್ಲಿ ಇರಿಸಿದ್ದಾರೆ. ನಮ್ಮ ದೇಶದಲ್ಲಿ ಜನರು ನೇರವಾಗಿ ಪ್ರಧಾನ ಮಂತ್ರಿಯನ್ನು ಆಯ್ಕೆ ಮಾಡುವ ವ್ಯವಸ್ಥೆಯಿಲ್ಲ. ಜನರಿಂದ ಆಯ್ಕೆಯಾದ ಸಂಸದರು ಪ್ರಧಾನಿಯನ್ನು ಆಯ್ಕೆ ಮಾಡುತ್ತಾರೆ. ಆದರೆ ರಾಜಕೀಯ ಪಕ್ಷಗಳು ತಮ್ಮ ನಾಯಕನ ಮುಖವನ್ನು ಜನರೆದುರು ತೋರಿಸುವ ಅವಕಾಶವಂತೂ ಇದ್ದೇ ಇದೆ. ಪ್ರಧಾನಿ ನರೇಂದ್ರ ಮೋದಿ ಅಂತಹ ಮುಖ. ಬಿಜೆಪಿಗೆ ಅವರೇ ಮುಖ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿದ ಬಳಿಕ ಅಮಿತ್ ಶಾ ಅವರ ಇಮೇಜ್ ಕೂಡ ಜನರ ಮನಸ್ಸಿನಲ್ಲಿ ಬಹಳ ಗಟ್ಟಿಯಾಗಿದೆ. ಇದು ಮಾತ್ರವಲ್ಲ, ಇನ್ನೂ ಸಾಕಷ್ಟು ವಿಷಯಗಳಲ್ಲಿ ಅಮಿತ್ ಶಾ ಅವರ ಕಠಿಣ ನಿಲುವುಗಳನ್ನು ಜನರು ಮೆಚ್ಚಿಕೊಳ್ಳುತ್ತಾರೆ. ನಾನೇನು ಹೇಳುತ್ತಿದ್ದೇನೆಂದರೆ, ಪ್ರಜಾಪ್ರಭುತ್ವದಲ್ಲಿ ಜನರು ಒಬ್ಬ ನಾಯಕನನ್ನು ಆರಾಧಿಸಲು ಆತ ಅಧಿಕಾರದಲ್ಲೇ ಇರಬೇಕು ಎಂದೇನಿಲ್ಲ. ಇದನ್ನು ನಾವು ಯಾವಾಗಲೂ ನೆನಪಿಟ್ಟುಕೊಳ್ಳಬೇಕು.

ಉಪ ರಾಷ್ಟ್ರಪತಿಗಳನ್ನು ಅಣಕಿಸುವುದು ಅಪರಾಧವಲ್ಲ, ಆದರೆ ಅಂತಹ ನಡತೆ ಸಂಸದರಿಗೆ ಹೊಂದುವುದಿಲ್ಲ. ಸಂಸತ್ತು ಎಂಬುದು ಮಿಮಿಕ್ರಿ ಮಾಡುವ ಜಾಗವಲ್ಲ. ಇದು ದೇಶದ ನೀತಿಗಳನ್ನು ರೂಪಿಸುವ ಜಾಗ. ದೇಶದ ಭವಿಷ್ಯವನ್ನು ನಿರ್ಧರಿಸುವ ಬಹಳ ಪ್ರಮುಖವಾದ ಸ್ಥಳವಿದು. ಸಾಂವಿಧಾನಿಕ ಹುದ್ದೆಯಲ್ಲಿ ಇರುವವರನ್ನು ಹಾಗೂ ಚುನಾಯಿತ ಪ್ರತಿನಿಧಿಗಳನ್ನು ಗೌರವಿಸುವುದು ನಮ್ಮ ಕರ್ತವ್ಯ.

ಇಷ್ಟಾಗಿಯೂ, ಸಂಸದರನ್ನೆಲ್ಲ ಸಂಸತ್ತಿನಿಂದ ಉಚ್ಚಾಟಿಸಿದರೆ ಸಂಸದೀಯ ಚಟುವಟಿಕೆಗಳು ಹೇಗೆ ನಡೆಯುತ್ತವೆ ಎಂಬ ಪ್ರಶ್ನೆಗೆ ನಮಗೆ ಉತ್ತರ ಸಿಗಲಿಲ್ಲ. ಪ್ರಜಾಪ್ರಭುತ್ವದಲ್ಲಿ ಕೆಲವೇ ಸಂಸದರು ಯಾವುದಾದರೂ ವಿಷಯದ ಬಗ್ಗೆ ಧ್ವನಿ ಎತ್ತಿದರೂ ಕೂಡ ಅದನ್ನು ಕೇಳಿಸಿಕೊಳ್ಳಬೇಕು. ಏಕೆಂದರೆ ಒಬ್ಬ ಸಂಸದ ಲಕ್ಷಾಂತರ ಜನರ ಪ್ರತಿನಿಧಿ. ಅವನು ಮಾತನಾಡುತ್ತಾನೆ ಅಂದರೆ ಲಕ್ಷಾಂತರ ಜನರು ಆ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆಂದು ಅರ್ಥ. ಅವರ ಕೂಗಿಗೆ ಬೆಲೆಯಿಲ್ಲವೇ? ಇದ್ದೇ ಇದೆ. ಕೇರಳದ ಆರ್‌ಎಸ್‌ಪಿಯಿಂದ ಒಬ್ಬನೇ ಒಬ್ಬ ಸಂಸದರಿದ್ದಾರೆ. ಅವರು ಎನ್.ಕೆ.ಪ್ರೇಮಚಂದ್ರನ್. ಅವರು ಮಾತನಾಡಲು ಎದ್ದುನಿಂತರೆ ಎಲ್ಲರೂ ಕಿವಿಗೊಟ್ಟು ಕೇಳಿಸಿಕೊಳ್ಳುತ್ತಾರೆ. ಮಾಜಿ ಪ್ರಧಾನಿ ಚಂದ್ರಶೇಖರ್, ಮಾಜಿ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್, ಮಾಜಿ ಸಂಸದ ಸೀತಾರಾಂ ಯೆಚೂರಿ ಅಥವಾ ಡಿ.ರಾಜಾ ಅವರು ಮಾತನಾಡಲು ಶುರುಮಾಡಿದರೆ ಎಲ್ಲರೂ ತದೇಕಚಿತ್ತದಿಂದ ಆಲಿಸುತ್ತಿದ್ದರು. ರಾಜ್ಯಸಭಾ ಸದಸ್ಯ, ಡಿಎಂಕೆಯ ತಿರುಚ್ಚಿ ಶಿವ ಕೂಡ ಅಂತಹ ಇನ್ನೊಬ್ಬ ವ್ಯಕ್ತಿ. ಹಾಗಾಗಿ ಸಂಖ್ಯಾಬಲವನ್ನು ಯಾವತ್ತೂ ಅಸ್ತ್ರವಾಗಿ ಬಳಸಲೇಬಾರದು. ನಾನಿದನ್ನು ಈ ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ, ಮುಂದೆಯೂ ಹೇಳುತ್ತೇನೆ; ಯಾವುದೇ ಸಂಗತಿಯನ್ನಾದರೂ ಅದರ ಮಿತಿಯನ್ನು ಮೀರಿ ಎಳೆಯಬಾರದು. ವಿರೋಧ ಪಕ್ಷಗಳಿಗೆ ತಮ್ಮನ್ನು ಶತ್ರುಗಳಂತೆ ನೋಡುತ್ತಿದ್ದಾರೆಂಬ ಭಾವನೆ ಬರುವಂತೆ ನಡೆದುಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಶೋಭೆಯಲ್ಲ. ಸಂಸದೀಯ ವ್ಯವಹಾರಗಳ ಸಚಿವಾಲಯವು ಈ ವಿಷಯ ಇಷ್ಟೊಂದು ಉಲ್ಬಣಗೊಳ್ಳಲು ಅವಕಾಶ ನೀಡಬಾರದಿತ್ತು.

ನೆನಪಿಡಿ, ಸಂಸದೀಯ ಪ್ರಜಾಪ್ರಭುತ್ವಕ್ಕೆ ಅದರದೇ ಆದ ಸಂಪ್ರದಾಯಗಳು ಹಾಗೂ ಮೌಲ್ಯಗಳಿವೆ. ಶಿಕ್ಷೆ ಯಾವತ್ತೂ ಹದ್ದು ಮೀರಬಾರದು.

# ಒಂದು ಕ್ಷಣ ನಿಂತು ಬದುಕನ್ನು ಆಸ್ವಾದಿಸಿ

ಒಬ್ಬ ಬಡವ. ಆ ಊರಿನ ಶ್ರೀಮಂತನ ಜಮೀನಿನಲ್ಲಿ ಕೆಲಸ ಮಾಡಿ ಅವರು ಕೊಡುವ ಸಂಬಳದಲ್ಲಿ ಅವನ ಜೀವನ ಸಾಗಿತ್ತು. ಹಾಸಲಿದ್ದರೆ ಹೊದಿಯಲು ಇಲ್ಲ, ಹೊದ್ದರೆ ಹಾಸಲು ಇಲ್ಲ ಎಂಬಂತಿತ್ತು. ಜಮೀನ್ದಾರ ಒಳ್ಳೆಯವನೇ ಆಗಿದ್ದನು. ಬಡವನಿಗೆ ದಿನಗೂಲಿ ಅಲ್ಲದೆ, ಒಮ್ಮೊಮ್ಮೆ ತರಕಾರಿ -ದವಸ- ಧಾನ್ಯ - ಹಬ್ಬಗಳಲ್ಲಿ ಬಟ್ಟೆ ಇಂಥ ಸಹಾಯವನ್ನು ಮಾಡುತ್ತಿದ್ದ. ಆದರೆ ಅದು ಬಡವನ ಉಪಜೀವನಕ್ಕೆ ಆಗುತ್ತಿತ್ತು. ಬಡವನಿಗೆ ಭಗವಂತನಲ್ಲಿ ಅಪರಿಮಿತ ಭಕ್ತಿ. ದಿನವೂ ಅವನಿಗೆ ನಮಿಸದೆ ಒಂದು ತುತ್ತನ್ನೂ ತಿನ್ನುತ್ತಿರಲಿಲ್ಲ. ಶ್ರೀಮಂತನ ಜಮೀನಿನಲ್ಲಿ ಎಷ್ಟು ಕಾಲ ದುಡಿಯುವುದು ಸ್ವಲ್ಪ ಜಾಗ ನನ್ನ ಸ್ವಂತದ್ದು ಅಂತ ಇದ್ದರೆ, ಕಷ್ಟಪಟ್ಟು ರಟ್ಟೆ ಮುರಿದು ದುಡಿದು ನನ್ನ ಜೀವನಕ್ಕೆ ಅಗತ್ಯವಿರುವುದನ್ನೆಲ್ಲಾ ಮಾಡಿಕೊಳ್ಳಬಹುದಿತ್ತು ಎಂಬ ಆಸೆ ಅವನ ಮನಸ್ಸಿನಲ್ಲಿತ್ತು. ಒಂದಲ್ಲ ಒಂದು ದಿನ ದೇವರು ಕಣ್ಣು ಬಿಟ್ಟು ನೋಡೇ ನೋಡುತ್ತಾನೆ ಎಂದು ನಂಬಿದ್ದ.

ಬಡವನ ಪ್ರಾರ್ಥನೆ- ನಂಬಿಕೆ -ಭಕ್ತಿ ಭಗವಂತನಿಗೂ ಅರ್ಥವಾಯಿತು. ಏನೇ ಆಗಲಿ ಭಕ್ತರ ಕೈ ಬಿಡಬಾರದು ಎಂದು ದೇವರು ಮನಸ್ಸು ಮಾಡಿದ. ಒಂದು ರಾತ್ರಿ ಬಡವನ ಕನಸಿನಲ್ಲಿ ಬಂದ ಭಗವಂತ, 'ನಿನ್ನ ಆಸೆಯನ್ನು ಪೂರೈಸುವೆ ನಾಳೆ ಬೆಳಗ್ಗೆ ನೀನು ಶಿವನ ಗುಡಿಯ ಸಮೀಪ ಬಾ' ಎಂದು ಅದೃಶ್ಯನಾದನು.

ಬಡವನಿಗೆ ಎಚ್ಚರವಾಯಿತು. ಅವನು ಕನಸು ಎಂದುಕೊಂಡರೂ, ಭಗವಂತ ಹೇಳಿದಂತೆ ನಿಜ ವಾಗಬಹುದು ಎಂದುಕೊಂಡು, ಬಹಳ ಉತ್ಸಾಹ ದಿಂದ ಮುಂಜಾನೆಯೇ ಎದ್ದು ಸ್ನಾನ ಮಾಡಿ, ದೇವರನ್ನು ಪ್ರಾರ್ಥಿಸಿ ಶಿವನ ಗುಡಿಯ ಸಮೀಪ ಬಂದನು. ಅಲ್ಲಿಯೇ ಸಮೀಪವಿದ್ದ ಮಾಸ್ತಿ ಕಲ್ಲಿನ ಹತ್ತಿರ ಒಬ್ಬ ಹಣ್ಣು ಹಣ್ಣು ಮುದುಕ ನಿಂತಿದ್ದನು. 'ಬಾ ನೀನು ಕೇಳಿದ್ದನ್ನು ಕೊಡುವಂತೆ ಭಗವಂತ

## ಒಂದೊಳ್ಳೆ ಮಾತು



ರೂಪಾ ಗುರುರಾಜ್
rgururaj628@gmail.com

ಕನಸಿನಲ್ಲಿ ಹೇಳಿದ್ದಾನೆ, ಅದರಂತೆ ಕೊಡುವೆ. ನೋಡು ಈ ಮಾಸ್ತಿಕಲ್ಲೇ ಗುರುತು. ಇಲ್ಲಿಂದ ನೀನು ಎಷ್ಟು ದೂರ ಬೇಕಾದರೂ ಹೋಗುವಿ, ಅದೆಲ್ಲಾ ಭೂಮಿ ನಿನ್ನದೇ ಆಗುತ್ತದೆ. ಸೂರ್ಯಾಸ್ತ ಆಗುವುದ ರೊಳಗೆ ನೀನು ಈ ಮಾಸ್ತಿಕಲ್ಲಿನ ಹತ್ತಿರ ಇರಬೇಕು' ಎಂದನು. ಬಡವನಿಗೆ ನಂಬಲಾಗ ಲಿಲ್ಲ. ಇಂಥ ಮಾತನ್ನು ಅವನು ಜೀವಮಾನ ದಲ್ಲೇ ಮೊದಲ ಸಲ ಕೇಳಿದ್ದ. ಅವನು ಈ ಕಲ್ಪನೆಯನ್ನು ಮಾಡಿರಲಿಲ್ಲ. ಮಿತಿಮೀರಿ ಸಂತೋಷವಾಯಿತು.

'ಆಯ್ತು ಭಗವಂತ ನೀನು ಹೇಳಿದಂತೆ ಮಾಡುವೆ' ಎಂದವನು ಒಂದು ಕ್ಷಣ ಯೋಚಿಸಿ, 'ಭಗವಂತ ಹೇಗೂ ಹೇಳಿದ್ದಾನೆ, ಸಂಜೆಯೊಳಗೆ ಮಾಸ್ತಿಕಲ್ಲು ಮುಟ್ಟಿದರೆ ಸರಿ, ಅಷ್ಟರೊಳಗೆ ಬೇಗನೆ ಹೋಗಿ ಎಷ್ಟು ಸಾಧ್ಯವೋ ಅಷ್ಟು ಜಾಗವನ್ನು ನನ್ನದಾಗಿಸಿ ಕೊಳ್ಳುತ್ತೇನೆ. ಮುಂದೆ ನಾನೇ ಈ ಊರಿನ ದೊಡ್ಡ ಜಮೀನ್ದಾರನಾಗುವೆ. ಎಲ್ಲರೂ ಗೌರವ ಕೊಡುತ್ತಾರೆ. ಮನೆಯಲ್ಲಿ ಆಳು- ಕಾಳು, ಎತ್ತು- ಗಾಡಿ, ಹಸು- ಕರು, ಎಲ್ಲಾ ಮಾಡಿಕೊಳ್ಳುವೆ' ಎನ್ನುತ್ತಾ ಓಡಲು ಶುರು ಮಾಡಿದನು. ಓಡುತ್ತಾ ಓಡುತ್ತಾ ಎಷ್ಟು ದೂರ ಹೋದನೋ, ಅವನಿಗೇ ಆಯಾಸವಾಗಿದ್ದು ಬಂದಷ್ಟು ಹೊತ್ತು ಮಲಗಿ ಹೊರಡುವ ಅಂದುಕೊಂಡು ಮಲಗಿಬಿಟ್ಟ. ಎಚ್ಚರವಾದಾಗ ಸಂಜೆಯಾಗಿತ್ತು.

ಮುದುಕನ ವೇಷದಲ್ಲಿ ಬಂದ ಭಗವಂತ ಅವನ ಸಮೀಪ ಬಂದು 'ಅತಿಯಾಸೆ ಪಟ್ಟು ಬಂದ ಅವಕಾಶವನ್ನೂ ನೀನೆ ಹಾಳು ಮಾಡಿ ಕೊಂಡೆ' ಎಂದು ಹೇಳಿದ. ಬಡವ 'ತನ್ನ ಹಣೆ ಯಲ್ಲಿ ಜಮೀನ್ದಾರನ ಜೀತದಾಳಾಗಿ ಇರುವು ದನ್ನೇ ಬರೆದಿದೆ' ಎಂದು ತನ್ನ ದುರಾಸೆಯನ್ನು ತಾನೇ ಶಪಿಸಿ ಮನೆಯತ್ತ ನಡೆದನು.

ನಾವು ಕೂಡ ಭಗವಂತ ನೀಡಿದ ಬದುಕೆಂಬ ಈ ಜಮೀನಿನಲ್ಲಿ ಗುರಿ ಇಲ್ಲದೆ ಓಡುತ್ತಿದ್ದೇವೆ. ನಮಗೆ ಬೇಕಾದ್ದು ನಮ್ಮ ಕೈಲಿ ಆಗಲೇ ಇದೆ. ಆದರೆ ಅದನ್ನು ತಿಳಿಯದೆ ಬೇಡದ್ದಕ್ಕೆ ಆಸೆ ಪಡುತ್ತಾ ಇನ್ನೂ ಹುಡುಕಾಟದಲ್ಲೇ ಇದ್ದೇವೆ. ಇನ್ನಾದರೂ ಸಂಜೆಯಾಗುವ ಮುನ್ನ ಸಂತೃಪ್ತಿ ಯಿಂದ ಬದುಕನ್ನು ಸಿಕ್ಕಿರುವ ಅವಕಾಶಗಳನ್ನು ಅನುಭವಿಸಬೇಕಿದೆ. ಸರ್ವೇ ಜನ ಸುಖಿನೋ ಭವಂತು.

CENTRAL UNIVERSITY OF KARNATAKA

**Any Feedback**

**Contact Us**

# Central Library


08477-226717

librarian@cuk.ac.in

http://cuklibrary.ac.in/index.html

**Central University of Karnataka, Kalaburagi-585367,India**